₹ 4 | ಪುಟ: 4 | ಸಂಪುಟ: 4 | ಸಂಚಿಕೆ 85 | newsbelagavi@gmail.com | 9900332089 | 9900332089



# ಬೆಳಗಾವಿ ವರದಿ

ಪ್ರಧಾನ ಸಂಪಾದಕರು: ಸತೀಶ್.ಬಿ.ಜಿ

BELAGAVI VARADI KANNADA DAILY

ಕನ್ನಡ ದಿನಪತ್ರಿಕೆ

Volume : 4 | Issue: 85 | Wednesday, 17, MAY, 2023 | RNI: KARKAN/2020/79084 | Regn,No:G-2/PMG/KA/NK/BM/139/2021-23 | 24

## ನಾನು ಬೆನ್ನಿಗೆ ಚೂರಿ ಹಾಕುವುದಿಲ್ಲ; ಬ್ಲಾಕ್‌ಮೇಲ್ ಮಾಡುವುದಿಲ್ಲ: ಡಿಕೆಶಿ

ಬೆಂಗಳೂರು: ಕಾಂಗ್ರೆಸ್ ವರಿಷ್ಠರ ಕರೆ ಮೇರೆಗೆ ದೆಹಲಿಗೆ ತೆರಳುತ್ತಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಅವರು ಮಾಧ್ಯಮವೊಂದಕ್ಕೆ ನೀಡಿದ ಹೇಳಿಕೆ ಇದು.

'ನಮ್ಮದು ಒಗ್ಗಟ್ಟಿನ ಮನೆ. ನಮ್ಮ ಸಂಖ್ಯೆ 135. ಯಾರೊಬ್ಬರನ್ನೂ ಒಡೆಯುವ ಕೆಲಸ ನಾನು ಮಾಡುವುದಿಲ್ಲ. ಇದು ಅವರಿಗೆ ಇಷ್ಟವಾಗುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಜವಾಬ್ದಾರಿಯುತ ನಾಯಕ. ನಾನು ಬೆನ್ನಿಗೆ ಚೂರಿ ಹಾಕುವುದಿಲ್ಲ. ಬ್ಲಾಕ್‌ಮೇಲ್ ಮಾಡುವುದಿಲ್ಲ' ಎಂದು ಅವರು ಮಾರ್ಮಿಕವಾಗಿ ಮಾತನಾಡಿದ್ದಾರೆ.



ಇದಕ್ಕೂ ಮೊದಲು, ಸದಾಶಿವನಗರದ ತಮ್ಮ ನಿವಾಸದ ಬಳಿ ಮಾಧ್ಯಮದವರೊಂದಿಗೆ ಮಾತನಾಡಿದ ಡಿ.ಕೆ ಶಿವಕುಮಾರ್, 'ಕಾಂಗ್ರೆಸ್ ಪಕ್ಷ ನನ್ನ ಪಾಲಿನ ದೇವರು. ಕಾಂಗ್ರೆಸ್ ಪಕ್ಷ ನನ್ನ ಪಾಲಿನ ದೇವಾಲಯ. ಕಾಂಗ್ರೆಸ್ ಪಕ್ಷ ನನಗೆ ತಾಯಿ ಇದ್ದಂತೆ' ಎಂದು ಭಾವನಾತ್ಮಕವಾಗಿ ಹೇಳಿದರು.

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ಸಂಬಂಧಿಸಿದಂತೆ ದೆಹಲಿಯಲ್ಲಿ ಇಂದು ಮಂಗಳವಾರ ಮಹತ್ವದ ಸಭೆ ನಡೆಯಲಿದೆ. ಈ ಸಭೆಯಲ್ಲಿ ಭಾಗವಹಿಸಲೆಂದು ಶಿವಕುಮಾರ್ ದೆಹಲಿಗೆ ತೆರಳಿದರು.

'ಎಐಸಿಸಿ ಪ್ರಧಾನ ಕಾರ್ಯದರ್ಶಿ ಒಬ್ಬನೇ ದೆಹಲಿಗೆ ಬರುವಂತೆ ಹೇಳಿದ್ದಾರೆ. ಹೀಗಾಗಿ ನಾನು ಒಬ್ಬನೇ ಹೋಗುತ್ತಿದ್ದೇನೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.


'ಮಕ್ಕಳಿಗೆ ಏನು ನೀಡಬೇಕು ಎಂಬುದು ದೇವರು ಮತ್ತು ತಾಯಿಗೆ ಗೊತ್ತಿರುತ್ತದೆ. ನಾನು ನನ್ನ ದೇವರನ್ನು ಭೇಟಿ ಮಾಡಲು ದೇವಾಲಯಕ್ಕೆ ಹೋಗುತ್ತಿದ್ದೇನೆ' ಎಂದೂ ಹೇಳಿದರು.

ಮುಖ್ಯಮಂತ್ರಿ ಸ್ಥಾನಕ್ಕಾಗಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಡುವೆ ತೀವ್ರ ಪೈಪೋಟಿ ನಡೆಯುತ್ತಿದ್ದು, ಈ ಗೊಂದಲ ವರಿಷ್ಠರ ಸಮ್ಮುಖದಲ್ಲಿ ಬಗೆಹರಿಯುವ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

ವರಿಷ್ಠರ ಆಹ್ವಾನದ ಮೇರೆಗೆ ಸಿದ್ದರಾಮಯ್ಯ ಅವರು ಸೋಮವಾರವೇ ತಮ್ಮ ಆಪ್ತ ಶಾಸಕರ ಜೊತೆ ದೆಹಲಿಗೆ ತೆರಳಿದ್ದಾರೆ. ಆದರೆ, ಅನಾರೋಗ್ಯದ ಕಾರಣಕ್ಕೆ ಶಿವಕುಮಾರ್ ತಮ್ಮ ದೆಹಲಿ ಪ್ರಯಾಣವನ್ನು ಸೋಮವಾರ ಸಂಜೆ ರದ್ದುಪಡಿಸಿದ್ದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಮಂಗಳವಾರ ದೆಹಲಿಯಲ್ಲಿ ವರಿಷ್ಠರ ಸಭೆ ನಡೆಯಿತು.

## ಈ ತಿಂಗಳ ಅಂತ್ಯಕ್ಕೆ ಹೊಸ ಸಂಸತ್ ಭವನ ಲೋಕಾರ್ಪಣೆ ಸಾಧ್ಯತೆ

ನವದೆಹಲಿ: ನೂತನ ಸಂಸತ್ ಭವನಕ್ಕೆ ಅಂತಿಮ ಸ್ಪರ್ಶ ನೀಡಲಾಗುತ್ತಿದ್ದು, ಈ ತಿಂಗಳ ಅಂತ್ಯದ ವೇಳೆಗೆ ಸಿದ್ಧಗೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ಮಂಗಳವಾರ ತಿಳಿಸಿವೆ.



ಅವರ ಪ್ರಕಾರ, ಸಿವಿಲ್ ಕಟ್ಟಡಗಳ ಸ್ವಚ್ಛತೆ ಪ್ರಾರಂಭವಾಗಿದೆ ಮತ್ತು ಹೊಸ ಕಟ್ಟಡದ ಉದ್ಘಾಟನೆಯ ಬಗ್ಗೆ ಇನ್ನೂ ಸರ್ಕಾರದಿಂದ ಯಾವುದೇ ಮಾಹಿತಿ ಇಲ್ಲ. ಎರಡು ವರ್ಷಗಳ ಹಿಂದೆ ನೂತನ ಸಂಸತ್ ಭವನದ ನಿರ್ಮಾಣ ಕಾರ್ಯ ಆರಂಭವಾಗಿತ್ತು.

ಸೆಂಟ್ರಲ್ ವಿಸ್ತಾ ಯೋಜನೆ ಭಾಗವಾಗಿ ಹೊಸ ಸಂಸತ್ ಭವನವನ್ನು ನಿರ್ಮಿಸಲಾಗುತ್ತಿದೆ.

ತ್ರಿಕೋನಾಕಾರದ ಸಂಸತ್ ಭವನ ಇದಾಗಿದೆ. ಕಟ್ಟಡ ಕಾಮಗಾರಿ ಈಗಾಗಲೇ ಪೂರ್ಣಗೊಂಡಿದ್ದು, ಕಟ್ಟಡದ ಒಳಾಂಗಣ ವಿನ್ಯಾಸದ ಕೆಲಸಗಳು ನಡೆಯುತ್ತಿವೆ.

ಸುಮಾರು 1,200 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಿಸಲಾದ ನಾಲ್ಕು ಅಂತಸ್ತಿನ ಕಟ್ಟಡದಲ್ಲಿ 1,224 ಸಂಸದರು ಕುಳಿತುಕೊಳ್ಳಲು ಅವಕಾಶವಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಡಿಸೆಂಬರ್ 2020 ರಲ್ಲಿ ಈ ಹೊಸ ಸಂಸತ್ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿದ್ದರು.

ಸರ್ಕಾರ ಕಳೆದ ವರ್ಷದ ನವೆಂಬರ್ ಒಳಗಡೆ ಕಾಮಗಾರಿ ಮುಕ್ತಾಯಗೊಳಿಸುವ ಗುರಿಯನ್ನು ನಿಗದಿ ಪಡಿಸಿತ್ತು. ಆದರೆ ಕೋವಿಡ್ ಮತ್ತು ಇತರೆ ಕೆಲ ಸಮಸ್ಯೆಗಳಿಂದಾಗಿ ಡೆಡ್‌ಲೈನ್ ವಿಸ್ತರಣೆಯಾಗಿ ಈಗ ಉದ್ಘಾಟನೆಯ ಹಂತಕ್ಕೆ ಬಂದಿದೆ.

## 10 ದಿನಗಳ ಪ್ರವಾಸಕ್ಕೆ ಅಮೆರಿಕಕ್ಕೆ ರಾಹುಲ್

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮೇ 31ರಂದು ಅಮೆರಿಕಕ್ಕೆ 10 ದಿನಗಳ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಜೂನ್ 4ರಂದು ರಾಹುಲ್ ಗಾಂಧಿ ನ್ಯೂಯಾರ್ಕ್‌ನ ಮ್ಯಾಡಿಸನ್ ಸ್ಕ್ವೇರ್ ಗಾರ್ಡನ್‌ನಲ್ಲಿ 5,000ಕ್ಕೂ ಹೆಚ್ಚು ಅನಿವಾಸಿ ಭಾರತೀಯರೊಂದಿಗೆ ರ್‍ಯಾಲಿ ನಡೆಸಲಿದ್ದಾರೆ.

ಬಳಿಕ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಚರ್ಚೆ ನಡೆಸಲಿದ್ದಾರೆ. ಜತೆಗೆ, ವಾಷಿಂಗ್ಟನ್ ಮತ್ತು ಕ್ಯಾಲಿಫೋರ್ನಿಯಾದಲ್ಲಿ ನಡೆಯಲಿರುವ ವಿವಿಧ ಸಭೆಗಳಲ್ಲಿ ರಾಹುಲ್ ಭಾಗಿಯಾಗಲಿದ್ದಾರೆ. ಇದೇ ವೇಳೆ ರಾಜಕಾರಣಿಗಳು ಸೇರಿದಂತೆ ಉದ್ಯಮಿಗಳೊಂದಿಗೂ ರಾಹುಲ್ ಮಾತುಕತೆ ನಡೆಸಲಿದ್ದಾರೆ.

ಇತ್ತೀಚೆಗೆ ಲಂಡನ್‌ಗೆ ಭೇಟಿ ನೀಡಿದ್ದ ರಾಹುಲ್, 'ಭಾರತದಲ್ಲಿ ಪ್ರಜಾಪ್ರಭುತ್ವ ಅಪಾಯದಲ್ಲಿದೆ' ಎಂದು ಹೇಳಿಕೆ ನೀಡಿದ್ದರು. ರಾಹುಲ್ ಹೇಳಿಕೆ ಖಂಡಿಸಿ ಕ್ಷಮೆಯಾಚಿಸುವಂತೆ ಆಗ್ರಹಿಸಿ ಸಂಸತ್‌ನಲ್ಲಿ ಬಿಜೆಪಿ ಪ್ರತಿಭಟನೆ ನಡೆಸಿತ್ತು.

ಜೂನ್ 22ರಂದು ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕ್ಕೆ ಭೇಟಿ ನೀಡಲಿದ್ದಾರೆ.

## ಕರ್ನಾಟಕದಲ್ಲಿ ತಾಲಿಬಾನೀಕರಣ ಆರಂಭ: ನಳಿನ್ ಕುಮಾರ್ ಕಟೀಲ್

ಬೆಂಗಳೂರು: ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿದ ನಂತರ ರಾಜ್ಯದಲ್ಲಿ ತಾಲಿಬಾನೀಕರಣ ಆರಂಭ ವಾಗಿದ್ದು, ದೇಶವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವವರು ಶಾಂತಿ ಕದಡಲು ಮುಂದಾಗುತ್ತಿದ್ದಾರೆ ಎಂದು ಕರ್ನಾಟಕ ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮಂಗಳವಾರ ಆರೋಪಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯಲ್ಲಿ ತಮ್ಮ ಮನೆಯ ಹೊರಗೆ ಪಟಾಕಿ ಸಿಡಿಸುವುದನ್ನು ವಿರೋಧಿಸಿದ್ದ ಬಿಜೆಪಿ ಕಾರ್ಯಕರ್ತನ ಮೇಲೆ ದಾಳಿ ನಡೆದಿದ್ದು, ಗಂಭೀರವಾಗಿ ಗಾಯಗೊಂಡಿದ್ದ ಕೃಷ್ಣಪ್ಪ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಕೃಷ್ಣಪ್ಪ ಅವರು ಸಾವನ್ನಪ್ಪಿದ್ದಾರೆ.



ಇಂದು ಹತ್ಯೆಗೀಡಾದ ಬಿಜೆಪಿ ಕಾರ್ಯಕರ್ತ ಕೃಷ್ಣಪ್ಪ ಅವರ ಕುಟುಂಬ ಸದಸ್ಯರನ್ನು ಭೇಟಿ ಮಾಡಿದ ದಕ್ಷಿಣ ಕನ್ನಡ ಸಂಸದ, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು, ರಾಜ್ಯದಲ್ಲಿ ತಾಲಿಬಾನೀಕರಣ ಆರಂಭವಾಗಿದೆ. ದೇಶವಿರೋಧಿ ಚಟುವಟಿಕೆಗಳಲ್ಲಿ ತೊಡಗುವವರು ಎದ್ದುನಿಂತು ಶಾಂತಿ ಮತ್ತು ಸೌಹಾರ್ದತೆಯನ್ನು ಹಾಳು ಮಾಡುತ್ತಿದ್ದಾರೆ. ಕಾಂಗ್ರೆಸ್ ಇಂತಹವರಿಗೆ ಆಶ್ರಯ ನೀಡಿ ಪ್ರಚಾರ ಮಾಡಿದ್ದರಿಂದ ಹೀಗಾಗುತ್ತಿದೆ ಎಂದು ಆರೋಪಿಸಿದರು.

ಈ ಘಟನೆಯನ್ನು ಖಂಡಿಸಿದ ಕಟೀಲ್ ಅವರು, ಕರ್ನಾಟಕವನ್ನು ಮಿನಿ ಬಿಹಾರ ಮಾಡುವ ಪ್ರಯತ್ನ ನಡೆದಿದೆ ಎಂದು ವಾಗ್ದಾಳಿ ನಡೆಸಿದರು.

ರಾಜ್ಯದಲ್ಲಿ ದ್ವೇಷದ ರಾಜಕಾರಣ ನಡೆಯುತ್ತಿದೆ. ಈ ಸರ್ಕಾರ ಮುಂದುವರಿದರೆ ರಾಜ್ಯಕ್ಕೆ ಏನಾಗುತ್ತದೆ ಎಂಬ ಸಂದೇಶವನ್ನು ಇದು ರವಾನಿಸುತ್ತದೆ.

ಇದು ಇಲ್ಲಿ ಜಂಗಲ್ ರಾಜ್ ಸ್ಥಾಪನೆಯಾಗುವ ಸಂಕೇತವಾಗಿದೆ ಎಂದು ಕಟೀಲ್ ಆರೋಪಿಸಿದರು.

## ಸೋತ ಸಚಿವರ ಮನೆಗೆ ತೆರಳಿ ಧೈರ್ಯ ತುಂಬಿದ ಹಂಗಾಮಿ ಸಿಎಂ ಬೊಮ್ಮಾಯಿ

ಬೆಂಗಳೂರು: ಸೋಮಣ್ಣನವರು ಯಾವಾಗ ಹಿನ್ನೆಡೆಯಾದರೂ ಮತ್ತೆ ಪುಟಿದೇಳುತ್ತಾರೆ. ಬರುವ ದಿನಗಳಲ್ಲಿ ಅವರಿಗೆ ಒಳ್ಳೆಯ ಅವಕಾಶ ಸಿಗಲಿದೆ. ನಾವು ಅವರ ಜೊತೆ ನಿಂತಿದ್ದೇವೆ ಎಂದು ಹಂಗಾಮಿ ಸಿಎಂ ಬಸವರಾಜ ಬೊಮ್ಮಾಯಿ ಹೇಳಿದರು.

ಅವರು ಮಾಜಿ ಸಚಿವ ವಿ.ಸೋಮಣ್ಣ ಅವರನ್ನು ಭೇಟಿ ಮಾಡಿದ ನಂತರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದರು. ಸೋಮಣ್ಣ ನಮ್ಮ ಹಿರಿಯ ನಾಯಕರು. ಸುಮಾರು 40 ವರ್ಷ ಜನಸೇವೆ ಮಾಡಿದವರು. ವಸತಿ ಸಚಿವರಾಗಿ ಅವರು ಬೆಂಗಳೂರಿನ ಅಭಿವೃದ್ಧಿಗೆ ಅನೇಕ ಕೊಡುಗೆ ಕೊಟ್ಟಿದ್ದಾರೆ. ಗೋವಿಂದರಾಜ ನಗರವನ್ನು ಮಾದರಿ ಕ್ಷೇತ್ರ ಮಾಡಿದ್ದಾರೆ. ಸೋಲು ಗೆಲುವು ರಾಜಕಾರಣದಲ್ಲಿ ಇದ್ದಿದ್ದೆ. ಅದನ್ನು ಮೀರಿ ಮತ್ತೆ ಬರಬೇಕು. ಸೋಮಣ್ಣ ಮತ್ತು ಪಕ್ಷ ಎರಡು ಕೂಡ ಆ ಕೆಲಸ ಮಾಡಲಿದೆ ಎಂದು ಹಂಗಾಮಿ ಸಿಎಂ ಬೊಮ್ಮಾಯಿ ಹೇಳಿದರು.

ರಾಜ್ಯಾಧ್ಯಕ್ಷರ ಬದಲಾವಣೆ ವಿಚಾರ ನನಗೆ ಗೊತ್ತಿಲ್ಲ. ಅದರ ಬಗ್ಗೆ ನಾನು ತಿಳಿದ ಮೇಲಷ್ಟೇ ಮಾತನಾಡಬಹುದು. ನಾಳೆ ಅಥವಾ ನಾಡಿದ್ದು



ಅಧ್ಯಕ್ಷರು ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಮಾಡಬಹುದು ಎಂದು ಬೊಮ್ಮಾಯಿ ಹೇಳಿದರು.

ಮಾಜಿ ಸಚಿವ ಸೋಮಣ್ಣ ಭೇಟಿಗೂ ಮುನ್ನ ಹಂಗಾಮಿ ಸಿಎಂ ಬಸವರಾಜ್ ಬೊಮಮಯಿ, ಮಾಜಿ ಸಚಿವ ಡಾ.ಕೆ.ಸುಧಾಕರ್ ಅವರನ್ನು ಭೇಟಿಯಾಗಿ ಧೈರ್ಯ ತುಂಬಿದರು.

ಈ ವೇಳೆ ಮಾತನಾಡಿದ ಬೊಮ್ಮಾಯಿ, ನಮ್ಮ ಜೊತೆ ಕೆಲಸ ಮಾಡಿದವರು, ಅಲ್ಪ ಪ್ರಮಾಣದಲ್ಲಿ ಸೋತಿದ್ದು, ಅವರೆಲ್ಲರ ಮನೆಗೆ ಭೇಟಿ ನೀಡಿ ಧೈರ್ಯ ತುಂಬುವ ಕೆಲಸ ಮಾಡುತ್ತಿದ್ದೇನೆ. ಸೋಲಿಗೆ ಕಾರಣವೇನು ಎಂಬ ಬಗ್ಗೆ ಪರಾಮರ್ಶೆ ಮಾಡಿದ್ದೇವೆ ಎಂದರು.

## ಡಿಕೆಶಿ ಮೇಲಿನ ದ್ವೇಷಕ್ಕಾಗಿ ಸಿಬಿಐ ನಿರ್ದೇಶಕರಾಗಿ ಪ್ರವೀಣ್ ಸೂದ್ ನೇಮಕ: ಶಾಸಕ ಕೆ.ಎನ್. ರಾಜಣ್ಣ

ತುಮಕೂರು: ಡಿ.ಕೆ. ಶಿವಕುಮಾರ್ ಅವರ ಮೇಲಿನ ದ್ವೇಷಕ್ಕಾಗಿಯೇ ಸಿಬಿಐ ನಿರ್ದೇಶಕರಾಗಿ ಪ್ರವೀಣ್ ಸೂದ್ ಅವರನ್ನು ನೇಮಿಸಲಾಗುತ್ತಿದೆ ಎಂದು ಮಧುಗಿರಿ ಕಾಂಗ್ರೆಸ್ ಶಾಸಕ ಕೆ.ಎನ್. ರಾಜಣ್ಣ ಹೊಸ ಬಾಂಬ್ ಸಿಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿ.ಕೆ. ಶಿವಕುಮಾರ್ ಅವರ ಮೇಲಿನ ದ್ವೇಷಕ್ಕಾಗಿಯೇ ಸಿಬಿಐ ನಿರ್ದೇಶಕರಾಗಿ ಪ್ರವೀಣ್ ಸೂದ್ ಅವರನ್ನು ನೇಮಿಸಲಾಗುತ್ತಿದೆ. ಹೆದರಿಸುವುದು ಬ್ಲ್ಯಾಕ್ ಮೇಲ್



ರಾಜಕಾರಣ ಮಾಡುವುದು ಬಿಜೆಪಿಯ ಕೆಲಸ ಎಂದು ಹೇಳಿದ್ದಾರೆ.

ಸಿದ್ದರಾಮಯ್ಯ ನೂರಕ್ಕೆ ನೂರರಷ್ಟು ಸಿದ್ದರಾಮಯ್ಯ ಸಿಎಂ ಆಗ್ತಾರೆ, ಹೈಕಮಾಂಡ್ ಒಲವು ಕೂಡ ಸಿದ್ದರಾಮಯ್ಯ ಪರ ಇದೆ. ಇಂದು ಸಿಎಂ ಆಯ್ಕೆ ಫೈನಲ್ ಆಗಲಿದ್ದು, ಮೇ. 18 ರಂದು ಸಿದ್ದರಾಮಯ್ಯ ನೂತನ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಬಹುದು. ಮೊದಲಿಗೆ ಸಿದ್ದರಾಮಯ್ಯ ಒಬ್ಬರೇ ಒಬ್ಬರೇ ಪ್ರಮಾಣವಚನ ಸ್ವೀಕಾರ ಮಾಡಲಿದ್ದಾರೆ. ಬಳಿಕ ಸಚಿವ ಸಂಪುಟ ಸ್ವಲ್ಪ ತಡವಾಗಬಹುದು. ಮೊದಲ ಸಂಪುಟದಲ್ಲೇ ಅನ್ನಭಾಗ್ಯ ಯೋಜನೆ ಜಾರಿ ಮಾಡುತ್ತೇವೆ. ನಾನು ಸಚಿವನಾಗಲೇಬೇಕು. ಸಹಕಾರ ಸಚಿವ ಸ್ಥಾನವೇ ಬೇಕು ಎಂದರು.

## ಗಡಿಯಲ್ಲಿ ನುಸುಳಿದ ಮಹಿಳೆ ಸೇನಾಪಡೆ ಗುಂಡಿಗೆ ಆಹುತಿ



ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯಲ್ಲಿ ಗಡಿ ನಿಯಂತ್ರಣ ರೇಖೆ (LOC) ದಾಟಿದ ಅಪರಿಚಿತ ಮಹಿಳೆಯನ್ನು ಭದ್ರತಾ ಪಡೆ ಗುಂಡಿಕ್ಕಿ ಹತ್ಯೆ ಮಾಡಿದೆ.

ಅಪರಿಚಿತ ಮಹಿಳೆ ಪಾಕ್ ಆಕ್ರಮಿತ ಕಾಶ್ಮೀರದಿಂದ ಬಂದಿದ್ದಳು ಎನ್ನಲಾಗಿದೆ. ಕಮಲ್‌ಕೋಟೆ ಪ್ರದೇಶದಲ್ಲಿ ಎಲ್‌ಒಸಿ ದಾಟಿ ಗಡಿ ಬೇಲಿಯ ಸಮೀಪ ಬರುತ್ತಿದ್ದಾಗ ಸೈನಿಕರು ಆಕೆಯನ್ನು ಪ್ರಶ್ನಿಸಿದರು. ಆದರೆ ಆಕೆ ಯಾವುದೇ ಉತ್ತರ ನೀಡದೆ ಮುನ್ನುಗ್ಗತೊಡಗಿದಾಗ ಆಕೆಗೆ ಎಚ್ಚರಿಕೆ ನೀಡಲಾಗಿದೆ.

ಅದಕ್ಕೂ ಕ್ಯಾರೇ ಎನ್ನದಿದ್ದಾಗ ಗುಂಡಿನ ದಾಳಿ ನಡೆಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗುಂಡಿನ ದಾಳಿಗೆ ಮಹಿಳೆ ಸ್ಥಳದಲ್ಲೇ ಮೃತಪಟ್ಟಿದ್ದಾಳೆ.

## ಬಿಜೆಪಿ ಉತ್ತಮ ಪ್ರತಿಪಕ್ಷವಾಗಲಿದೆ: ಶೋಭಾ

ಮೈಸೂರು: 'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಗೆಲುವು ಸಾಮಾನ್ಯ. ಸೋಲನ್ನು ಸ್ವೀಕರಿಸಿದ್ದೇವೆ. ಒಳ್ಳೆಯ ವಿರೋಧಿ ಪಕ್ಷವಾಗಿ ಬಿಜೆಪಿ ಕೆಲಸ ಮಾಡಲಿದೆ' ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳು ಶೇ 95ರಷ್ಟು ಹಳ್ಳಿಗಳನ್ನು ತಲುಪಿವೆ. ಮುಖ್ಯಮಂತ್ರಿಗಳಾಗಿದ್ದ ಬಿ.ಎಸ್. ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಉತ್ತಮ ಕೆಲಸ ಮಾಡಿದ್ದರು' ಎಂದರು.

ಗೆಲುವು ಸಾಧಿಸಿದವರಿಗೆ ಶುಭವಾಗಲಿ. ಕೊಟ್ಟಿರುವ ಭರವಸೆಗಳನ್ನು ಈಡೇರಿಸುವ



ಶಕ್ತಿ ಸಿಗಲಿ' ಎಂದು ಹೇಳಿದ ಅವರು, 'ಮುಖ್ಯಮಂತ್ರಿ ಆಯ್ಕೆ, ಆ ಪಕ್ಷದ ಆಂತರಿಕ ವಿಚಾರ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ದೇಶದಾದ್ಯಂತ 71,206 ಮಂದಿಗೆ ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಉದ್ಯೋಗ ನೀಡಲಾಗುತ್ತಿದೆ. ಬರುವ ದಿನಗಳಲ್ಲೂ ಅರ್ಹ ಅಭ್ಯರ್ಥಿಗಳಿಗೆ ನೇಮಕ ಪತ್ರ ನೀಡಲಾಗುವುದು' ಎಂದು ಮಾಹಿತಿ ನೀಡಿದರು.

ಆರ್ಥಿಕ ಬಿಕ್ಕಟ್ಟಿನಿಂದ ಉದ್ಯೋಗ ನೇಮಕ ಪ್ರಕ್ರಿಯೆಗಳು ನಡೆದಿರಲಿಲ್ಲ. ಹಿಂದಿನ ಸರ್ಕಾರಗಳೂ ಯುವ ಸಮುದಾಯದ ಬಗ್ಗೆ ಕಾಳಜಿ ಹೊಂದಿರಲಿಲ್ಲ. ಇದೀಗ ಕೇಂದ್ರವು ರಾಜ್ಯ ಸರ್ಕಾರಗಳಿಗೂ ಅಗತ್ಯ ಉದ್ಯೋಗ ಭರ್ತಿಗೆ ಕ್ರಮ ವಹಿಸುವಂತೆ ಸೂಚನೆ ನೀಡಿದೆ' ಎಂದರು.

ಎಲ್ಲ ಇಲಾಖೆಗಳಲ್ಲೂ ಸಿಬ್ಬಂದಿ ಕೊರತೆಯಿಂದ ಕೆಲಸಗಳು ವೇಗವಾಗಿ ನಡೆಯುತ್ತಿರಲಿಲ್ಲ. ಉದ್ಯೋಗ ಮೇಳವನ್ನು ಆಯೋಜಿಸದ್ದರಿಂದ ಅರ್ಹರಿಗೆ ಉದ್ಯೋಗ ಸಿಗುತ್ತಿರಲಿಲ್ಲ. ಇದೀಗ ಪಾರದರ್ಶಕ ವ್ಯವಸ್ಥೆಯಡಿ ನೇಮಕಾತಿ ನಡೆಯುತ್ತಿದೆ. ಯುವ ಸಮುದಾಯಕ್ಕೆ ಉತ್ಸಾಹ ತುಂಬಲಾಗುತ್ತಿದೆ. ನಿರುದ್ಯೋಗ ಸಮಸ್ಯೆ ಬಗೆಹರಿಯಲಿದೆ' ಎಂದು ತಿಳಿಸಿದರು.

## ಪ್ರತಿಭಟನೆ ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಲು ಕುಸ್ತಿಪಟುಗಳ ಚಿಂತನೆ



ನವದೆಹಲಿ: ಲೈಂಗಿಕ ದೌರ್ಜನ್ಯ ಆರೋಪ ಎದುರಿಸುತ್ತಿರುವ ಬ್ರಿಜ್‌ಭೂಷಣ್ ಶರಣ್ ಸಿಂಗ್ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ನಡೆಸುತ್ತಿರುವ ಪ್ರತಿಭಟನೆಗೆ ಕುಸ್ತಿಪಟುಗಳು ವಿವಿಧ ದೇಶಗಳ ಒಲಿಂಪಿಕ್ ಪದಕ ವಿಜೇತರ ನೆರವು ಕೋರಲು ತೀರ್ಮಾನಿಸಿದ್ದಾರೆ.

ಇದರೊಂದಿಗೆ ಪ್ರತಿಭಟನೆಯನ್ನು 'ವಿಶ್ವಮಟ್ಟದ ಆಂದೋಲನ'ವನ್ನಾಗಿ ರೂಪಿಸುವ ನಿರ್ಧಾರ ಕೈಗೊಂಡಿದ್ದಾರೆ.

ಬ್ರಿಜ್‌ಭೂಷಣ್ ಅವರನ್ನು ಬಂಧಿಸಬೇಕೆನ್ನುವ ನಮ್ಮ ಬೇಡಿಕೆ ಈಡೇರದಿದ್ದರೆ ಮೇ 21ರಂದು 'ದೊಡ್ಡ ನಿರ್ಧಾರ'ವೊಂದನ್ನು' ತೆಗೆದುಕೊಳ್ಳುವೆವು' ಎಂದೂ ಕುಸ್ತಿಪಟುಗಳು ಎಚ್ಚರಿಸಿದ್ದಾರೆ.

'ಪ್ರತಿಭಟನೆಯನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಲಿದ್ದೇವೆ. ಇದಕ್ಕಾಗಿ ಬೇರೆ ಬೇರೆ ದೇಶಗಳ ಒಲಿಂಪಿಯನ್ಸ್ ಮತ್ತು ಒಲಿಂಪಿಕ್ ಪದಕ ವಿಜೇತರನ್ನು ಸಂಪರ್ಕಿಸಿ ಬೆಂಬಲ ಕೋರುವೆವು' ಎಂದು ಕುಸ್ತಿಪಟು ವಿನೇಶಾ ಫೋಗಟ್ ಹೇಳಿದ್ದಾರೆ.

ಕಳಂಕ ತರುವ ಯತ್ನ: 'ತಮ್ಮ ಪ್ರತಿಭಟನೆಗೆ ಕಳಂಕ ತರಲು ಭಾನುವಾರ ರಾತ್ರಿ ಕೆಲವರು ಪ್ರಯತ್ನಿಸಿದರು. ಪ್ರತಿಭಟನೆ ಸ್ಥಳದಲ್ಲಿ ನಮ್ಮ ಚಲನವಲನಗಳ ಮೇಲೆ ನಿಗಾ ಇಡಲಾಗುತ್ತಿದೆ. ನಮ್ಮ ಫೋಟೊ ತೆಗೆಯಲಾಗುತ್ತಿದ್ದ ಕೆಲವರನ್ನು ತಡೆಯಲು ಪ್ರಯತ್ನಿಸಿದರೆ ಅವರು ನಮ್ಮ ಮಾತು ಕೇಳಲಿಲ್ಲ.

ಕೆಲವು ಅಪರಿಚಿತ ಮಹಿಳೆಯರು ನಮ್ಮ ಟೆಂಟ್‌ಗಳಲ್ಲಿ ಮಲಗಲು ಪ್ರಯತ್ನಿಸಿದರು' ಎಂದು ವಿನೇಶಾ ಆರೋಪಿಸಿದ್ದಾರೆ.

## ಸತೀಶ್ ಜಾರಕಿಹೊಳಿಗೆ ಡಿಸಿಎಂ ಸ್ಥಾನ ನೀಡಲು ಒತ್ತಾಯ

ಬೆಳಗಾವಿ: ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿಗೆ ಡಿಸಿಎಂ ಸ್ಥಾನ ನೀಡಲು ಬೆಳಗಾವಿ ಉತ್ತರ ಕ್ಷೇತ್ರದ ಕಾಂಗ್ರೆಸ್ ಶಾಸಕ ಆಸೀಫ್ ಸೇಠ್ ಒತ್ತಾಯಿಸಿದ್ದಾರೆ.



ಉತ್ತರ ಕರ್ನಾಟಕದಲ್ಲಿ ಸತೀಶ್ ಜಾರಕಿಹೊಳಿ ಅವರ ನಾಯಕತ್ವ ಇದೆ. ಸತೀಶ್ ಜಾರಕಿಹೊಳಿ ಡಿಸಿಎಂ ಮಾಡಬೇಕು ಎಂದು ಹೈಕಮಾಂಡ್‌ಗೆ ವಿನಂತಿ ಮಾಡುತ್ತೇನೆ. ನಾನು ಪ್ರಚಾರ ಭಾಷಣದಲ್ಲಿ ನೀಡಿದ ಹೇಳಿಕೆಗೆ ಬದ್ಧನಿದ್ದೇನೆ.

ಇನ್ನು ಇದೇ ವೇಳೆ ಜಮೀರ್ ಅಹಮ್ಮದ್‌ಗೆ ಡಿಸಿಎಂಗೆ ಸ್ಥಾನ ನೀಡಲು ಮುಸ್ಲಿಂ ಸಮುದಾಯ ಆಗ್ರಹ ವಿಚಾರ 'ಅದು ಹೈಕಮಾಂಡ್‌ಗೆ ಬಿಟ್ಟಿದ್ದು, ಈಗಾಗಲೇ ಎಲ್ಲಾ ಕಾಂಗ್ರೆಸ್ ಶಾಸಕರು ಹೈಕಮಾಂಡ್ ನಿರ್ಣಯ ಮಾಡಲಿ ಎಂದು ಹೇಳಿದ್ದೇವೆ ಎಂದು ತಿಳಿಸಿದ್ದಾರೆ.

## ಸಿ.ಟಿ. ರವಿಗೆ ಮತ್ತೊಂದು ಶಾಕ್: ಆಪ್ತರು ಕಾಂಗ್ರೆಸ್ ಗೆ ಸೇರ್ಪಡೆ



ಬೆಂಗಳೂರು: ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ಸಿ.ಟಿ. ರವಿ, ತಮ್ಮ ಒಂದು ಕಾಲದ ಆಪ್ತ, ಕಾಂಗ್ರೆಸ್ ಅಭ್ಯರ್ಥಿ ಎಚ್.ಡಿ. ತಮ್ಮಯ್ಯ ಅವರಿಂದಲೇ ಪರಾಭವಗೊಂಡಿದ್ದಾರೆ.

ಚುನಾವಣೆ ಸಂದರ್ಭದಲ್ಲಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾಗಿದ್ದ ತಮ್ಮಯ್ಯ 7,000ಕ್ಕೂ ಅಧಿಕ ಮತಗಳಿಂದ ಗೆಲುವಿನ ನಗೆ ಬೀರಿದ್ದಾರೆ.

ಈ ಸೋಲಿನ ಮಧ್ಯೆ ಸಿ.ಟಿ. ರವಿಯವರಿಗೆ ಮತ್ತೊಂದು ಶಾಕ್ ಎದುರಾಗಿದೆ. ಕಳೆದ 20 ವರ್ಷಗಳಿಂದಲೂ ಸಿ.ಟಿ. ರವಿ ಅವರ ಜೊತೆಗಿದ್ದ ಹಲವರು ತಮ್ಮಯ್ಯ ಗೆಲುವಿನ ಬಳಿಕ ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಗೊಳ್ಳುತ್ತಿದ್ದಾರೆ ಎಂದು ತಿಳಿದುಬಂದಿದೆ. ಇವರುಗಳು ತಮ್ಮಯ್ಯ ಅವರಿಗೂ ಆಪ್ತರಾಗಿದ್ದು ಈಗ ಅವರ ಬಣ ಸೇರುತ್ತಿದ್ದಾರೆ.

ಹೀಗಾಗಿ ಪಕ್ಷ ತೊರೆಯದಂತೆ ಇವರುಗಳನ್ನು ಹಿಡಿದಿಟ್ಟುಕೊಳ್ಳುವ ಕೆಲಸವನ್ನು ಸಿ.ಟಿ. ರವಿಯವರು ಮಾಡಬೇಕಿದ್ದು, ಇದರ ಜೊತೆಗೆ ತಮ್ಮ ಸೋಲಿನ ಹಿಂದಿನ ಕಾರಣಗಳನ್ನೂ ಸಹ ವಿಶ್ಲೇಷಿಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

## ಕೃತಕ ಸಿಹಿಕಾರಕಗಳು ಹಾನಿಕಾರಕ: ವಿಶ್ವ ಆರೋಗ್ಯ ಸಂಸ್ಥೆ

ಜಿನೇವಾ: 'ಬಹಳಷ್ಟು ಉತ್ಪನ್ನಗಳಲ್ಲಿ ಸಕ್ಕರೆಯ ಬದಲು ಕೃತಕ ಸಿಹಿಕಾರಕಗಳನ್ನು ಬಳಸಲಾಗುತ್ತಿದೆ. ಇದು ದೇಹ ತೂಕ ತಗ್ಗಿಸುವುದಕ್ಕೆ ಸಹಕಾರಿಯಾಗಲಾರದು. ಬದಲಾಗಿ ಗಂಭೀರ ಆರೋಗ್ಯ ಸಮಸ್ಯೆಗಳಿಗೆ ದಾರಿ ಮಾಡಿಕೊಡಬಹುದು' ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಮಂಗಳವಾರ ಹೇಳಿದೆ.

'ಸದ್ಯ ಲಭ್ಯವಿರುವ ಸಂಶೋಧನಾ ವರದಿಗಳ ಪ್ರಕಾರ ವಯಸ್ಕರು ಹಾಗೂ ಮಕ್ಕಳ ದೇಹದೊಳಗೆ ಅನಗತ್ಯ ಕೊಬ್ಬು ಶೇಖರಣೆಯಾಗದಂತೆ ತಡೆಯಲು ಕೃತಕ ಸಿಹಿಕಾರಕಗಳು ಸಹಕಾರಿಯಾಗಲಾರವು.

World Health Organization

ಇಂತಹ ಪದಾರ್ಥಗಳ ಸೇವನೆಯಿಂದ ಡಯಾಬಿಟಿಸ್, ಹೃದಯ ರಕ್ತನಾಳದ ಕಾಯಿಲೆಗಳು ಹಾಗೂ ವಯಸ್ಕರಲ್ಲಿ ಮರಣದಂತಹ ಅಪಾಯ ಹೆಚ್ಚಿರುತ್ತದೆ' ಎಂದಿದೆ.

ದೇಹ ತೂಕ ಹೆಚ್ಚಾಗದಂತೆ ತಡೆಯಲು ಜನರು ಡಯಟ್ ಸೋಡಾ ಸೇರಿದಂತೆ ಇನ್ನಿತರೆ ಪಾನೀಯ ಹಾಗೂ ಪದಾರ್ಥಗಳ ಮೊರೆ ಹೋಗುತ್ತಾರೆ. ಆ ಮೂಲಕ ಪ್ರತಿ ನಿತ್ಯವೂ ಲಕ್ಷಾಂತರ ಮಂದಿಯು ಕೃತಕ ಸಿಹಿಕಾರಕಗಳನ್ನು ದೇಹಕ್ಕೆ ತೆಗೆದುಕೊಳ್ಳುತ್ತಾರೆ.

ಇಂತಹ ಪದಾರ್ಥಗಳು ಎಷ್ಟರ ಮಟ್ಟಿಗೆ ಆರೋಗ್ಯಕರ ಎಂಬುದು ಚರ್ಚೆಗೆ ಎಡೆ ಮಾಡಿಕೊಟ್ಟಿದೆ.

'ಸಕ್ಕರೆಯ ಬದಲಿಗೆ ಕೃತಕ ಸಿಹಿಕಾರಕಗಳ ಸೇವನೆಯು ದೀರ್ಘಾವಧಿಯಲ್ಲಿ ದೇಹ ತೂಕ ನಿಯಂತ್ರಿಸುವುದಕ್ಕೆ ನೆರವಾಗುವುದಿಲ್ಲ.

ಹಣ್ಣುಗಳು ಸೇರಿದಂತೆ ಸಕ್ಕರೆಯ ಅಂಶಗಳನ್ನೊಳಗೊಂಡಂತಹ ನೈಸರ್ಗಿಕ ದತ್ತ ಆಹಾರ ಪದಾರ್ಥಗಳನ್ನು ಸೇವಿಸುವುದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು' ಎಂದು ಡಬ್ಲ್ಯುಎಚ್‌ಒನ ಪೌಷ್ಟಿಕಾಂಶ ಮತ್ತು ಆಹಾರ ಸುರಕ್ಷತಾ ವಿಭಾಗದ ನಿರ್ದೇಶಕ ಫ್ರಾನ್ಸೆಸ್ಕೊ ಬ್ರಾಂಕಾ ತಿಳಿಸಿದ್ದಾರೆ.

'ತಂಪು ಪಾನೀಯ ಹಾಗೂ ಇತರೆ ಆಹಾರ ಪದಾರ್ಥಗಳಲ್ಲಿ ಆಸ್ಪರ್ಟಮೆ, ಅಡ್ವಾಂಟಮೆ, ಸೈಕ್ಲಾಮೇಟ್ಸ್, ನಿಯೊಟೇಮ್, ಸ್ಯಾಚರಿನ್, ಸುಕ್ರಾಲೋಸ್, ಸ್ಟೆವಿಯಾ ಮತ್ತು ಸ್ಟೆವಿಯಾ ಡೆರಿವೇಟಿವ್ಸ್‌ನಂತಹ ಸಿಹಿಕಾರಕಗಳನ್ನು ಅಗಾಧ ಪ್ರಮಾಣದಲ್ಲಿ ಸದ್ಯ ಬಳಕೆ ಮಾಡಲಾಗುತ್ತಿದೆ' ಎಂದು ಡಬ್ಲ್ಯುಎಚ್‌ಒ ಹೇಳಿದೆ.

# ಕಾರ್ಯಕರ್ತರಿಗೆ ಕೋಟಿ ಕೋಟಿ ನಮನ ಸಲ್ಲಿಸಿದ ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ

ಮೂಡಲಗಿ : ರಾಜ್ಯದ 224 ಕ್ಷೇತ್ರಗಳಲ್ಲಿಯೇ ನಮ್ಮ ಅರಭಾವಿ ಕ್ಷೇತ್ರವು ಬಹು ವಿಶೇಷತೆಗಳಿಂದ ಕೂಡಿದ್ದು, ಯಾವ ಹಳ್ಳಿಗಳಿಗೂ ಪ್ರಚಾರವನ್ನು ಮಾಡದೇ ಪ್ರತಿ ಮತಗಟ್ಟೆಗಳಲ್ಲಿ ಕಾರ್ಯಕರ್ತರು ಮತ್ತು ಮುಖಂಡರು ನನ್ನ ಆಯ್ಕೆಗೆ ಶ್ರಮಿಸಿದ್ದಾರೆ. ಯಾವ ಆಮೀಷಕ್ಕೂ ಒಳಗಾಗದೇ ನಾನು ಮನೆಯಲ್ಲಿದ್ದರೂ ದಾಖಲೆಯ ಮತಗಳ ವಿಜಯಕ್ಕೆ ಕಾರಣೀಕರ್ತರಾಗಿದ್ದಾರೆ. ಇಂತಹ ಕಾರ್ಯಕರ್ತರನ್ನು ಪಡೆದಿರುವುದು ನಾನು ಧನ್ಯನಾಗಿದ್ದೇನೆ ಎಂದು ಶಾಸಕ ಹಾಗೂ ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ತಿಳಿಸಿದರು.

ಸೋಮವಾರ ಸಂಜೆ ತಾಲೂಕಿನ ನಾಗನೂರ ಪಟ್ಟಣದ ಮಹಾಲಿಂಗೇಶ್ವರ ಮಠದ ಆವರಣದಲ್ಲಿ ಜರುಗಿದ ಅರಭಾವಿ ಮತಕ್ಷೇತ್ರದ ಕಾರ್ಯಕರ್ತರ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ನಮ್ಮ ಕಾರ್ಯಕರ್ತರು ಯಾವುದೇ ಜಾತಿ, ಮತ ನೋಡದೇ ತಮ್ಮ ಮನೆಯ ಮಗನಂತೆ ತಿಳಿದುಕೊಂಡು ಸುಮಾರು 71540 ಮತಗಳ ಅಂತರದಿಂದ ಗೆಲ್ಲಿಸಿಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಕೋಟಿ ಕೋಟಿ ನಮನಗಳನ್ನು ಸಲ್ಲಿಸುತ್ತೇನೆ ಎಂದು ತಿಳಿಸಿದರು.

ಎಲ್ಲ 223 ಕ್ಷೇತ್ರಗಳಲ್ಲಿ ಆಯಾ ಪಕ್ಷದ ಅಭ್ಯರ್ಥಿಗಳು ಉರಿಬಿಸಿಲಿನಲ್ಲಿ ಪ್ರಚಾರ ಕಾರ್ಯ ನಡೆಸಿದ್ದಾರೆ. ಸಾಕಷ್ಟು ಶಕ್ತಿ ಮೀರಿ ದುಡಿದಿದ್ದಾರೆ. ಆದರೆ ನಾನು ಈ ಕ್ಷೇತ್ರದಲ್ಲಿ ಕಾರ್ಯಕರ್ತರನ್ನು ನಂಬಿ ಯಾವ ಪ್ರಚಾರವನ್ನು ನಡೆಸಲಿಲ್ಲ. ಕೇವಲ ಮೂಡಲಗಿ ಪಟ್ಟಣ–ಕ್ಕೆ ಚುನಾವಣಾ ಪ್ರಚಾರದ ಬಹಿರಂಗ ಸಭೆಯ ಕೊನೆಯ ದಿನದಂದು ಮಾತ್ರ ತೆರಳಿ ಮತಯಾಚಿಸಿದ್ದೇನೆ. ಅದನ್ನು ಬಿಟ್ಟು ಕ್ಷೇತ್ರದ ಯಾವ ಹಳ್ಳಿಗಳಿಗೂ ಭೇಟಿ ಕೊಡಲಿಲ್ಲ. ಎಲ್ಲವನ್ನು ಪಕ್ಷದ ಕಾರ್ಯಕರ್ತರಿಗೆ ಬಿಟ್ಟಿದ್ದೆ. ಈ ಚುನಾವಣೆಯು ಕೆಲವರಿಗೆ ಸುಲಭವಾಗಿ ಕಂಡಿದ್ದರೂ ಒಳ ಒಳಗೆ ಕೆಲವು ಮಸಲತ್ತುಗಳು ಬೆಳಕಿಗೆ ಬಂದಿವೆ. ಎಲ್ಲಿಂದಲೋ ಕೂತು ಮುಖಂಡ–ರಿಗೆ ಕೆಲ ವಿರೋಧಿಗಳು ಕರೆಗಳನ್ನು ಮಾಡಿದ್ದಾರೆ. ಆದರೂ ಅವುಗಳಿಗೆ ನಮ್ಮ



ಕಾರ್ಯಕರ್ತರು ಕಿಂಚಿತ್ತೂ ಬೆಲೆ ಕೊಟ್ಟಿಲ್ಲ. ಪ್ರತಿ ಸಮಾಜಗಳ ಮುಖಂಡರು ಸಾಕಷ್ಟು ದುಡಿದು ನನಗೆ 1.15 ಲಕ್ಷ ಮತಗಳನ್ನು ನೀಡಿದ್ದಾರೆ ಎಂದು ಹೇಳಿದರು.

ಈ ಸಲ ಅತ್ಯಧಿಕ ಮತಗಳು: ಈ ಹಿಂದೆ ನಡೆದ ಯಾವ ಚುನಾವಣೆಯಲ್ಲಿಯೂ ಇಷ್ಟೊಂದು ಮತಗಳನ್ನು ಪಡೆದಿಲ್ಲ. 2013 ರಲ್ಲಿ 99283 ಮತಗಳನ್ನು ಪಡೆದು ಸುಮಾರು 75221 ಮತಗಳ ಅಂತರದಿಂದ ಜಯ ಗಳಿಸಿದ್ದೆ. ಮೇ 10 ರಂದು ನಡೆದ ಚುನಾವಣೆಯಲ್ಲಿ ಹಾಲುಮತ, ಉಪ್ಪಾರ, ವೀರಶೈವ ಲಿಂಗಾಯತ, ರಡ್ಡಿ, ಮುಸ್ಲಿಂ, ಮರಾಠಾ, ಕ್ಷತ್ರೀಯ, ವಿಶ್ವಕರ್ಮ, ತಳವಾರ, ಜೈನ್, ದಲಿತ, ಹೆಳವರ ಸಮುದಾಯ ಸೇರಿದಂತೆ ಇನ್ನುಳಿದ ಎಲ್ಲ ಸಮುದಾಯಗಳು ನನ್ನನ್ನು ಬೆಂಬಲಿಸಿ ಆಶೀರ್ವಾದ ಮಾಡಿದ್ದಾರೆ. ಅವರಿಗೆಲ್ಲ ನಾನು ಎಷ್ಟು ಕೃತಜ್ಞತೆಗಳನ್ನು ಹೇಳಿದರೂ ಸಾಲದು. ಅವರ ಋಣ ನನ್ನ ಮೇಲಿದೆ. ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಅರಭಾವಿ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಶಕ್ತಿಮೀರಿ ಶ್ರಮಿಸುತ್ತೇನೆ ಎಂದು ಅವರು ಹೇಳಿದರು.

ಅನಾವಶ್ಯಕ ಖರ್ಚುಗಳಿಗೆ ಕಡಿವಾಣ: ಈ ಚುನಾವಣೆಯಲ್ಲಿ ಕೆಲ ಮುಖಂಡರು ನನಗೆ ಮಾರ್ಗದರ್ಶನ ಮಾಡಿದ್ದಾರೆ. ಅನಾವಶ್ಯಕ ಖರ್ಚು ವೆಚ್ಚಗಳ ಬಗ್ಗೆ ಮಾತನಾಡಿದ್ದಾರೆ.

ಮುಂದಿನ ದಿನಗಳಲ್ಲಿ ಮಹಿಳೆಯ–ರಿಗೆ ಗೌರವ ಕಾಪಾಡಲು ಶೌಚಾಲಯ ಹಾಗೂ ಒಳಚರಂಡಿ ನಿರ್ಮಾಣಕ್ಕೆ ಆದ–್ಯತೆ ನೀಡುತ್ತೇನೆ.

ಇನ್ನು ಮುಂದೆ ಎನ್‌ಎಸ್‌ಎಫ್ ಕಛೇರಿಯಲ್ಲಿ ಭೇಟಿಯನ್ನು ಕಡಿಮೆ ಮಾಡಿ ಆಯಾ ಜಿಲ್ಲಾ ಪಂಚಾಯತಿ ಕ್ಷೇತ್ರಗಳಲ್ಲಿ ಸಂಚರಿಸಿ ಸಾರ್ವಜನಿಕ ಕುಂದು ಕೊರತೆಗಳನ್ನು ವಿಚಾರಿಸುತ್ತೇನೆ. ಅಲ್ಲಿಯೇ ಅಧಿಕಾರಿಗಳನ್ನು ಕರೆಯಿಸಿ ಸ್ಥಳದಲ್ಲಿಯೇ ಸಮಸ್ಯೆಗಳ ಪರಿಹಾರಕ್ಕೆ ಯತ್ನಿಸುತ್ತೇನೆ ಎಂದು ಹೇಳಿದರು.

ಕ್ಷೇತ್ರದ ಬಹುತೇಕ ಮುಖಂಡರು ಹಾಗೂ ಕಾರ್ಯಕರ್ತರು ನಮ್ಮ ಎನ್–ಎಸ್‌ಎಫ್ ಸಿಬ್ಬಂದಿ ವರ್ಗದವರ ಬಗ್ಗೆ ದೂರುಗಳನ್ನು ನೀಡಿದ್ದಾರೆ. ಸಾರ್ವಜನಿಕರ ಸಮಸ್ಯೆಗಳಿಗೆ ಸಮರ್ಪಕವಾಗಿ ಸ್ಪಂದಿಸುತ್ತಿಲ್ಲ. ದೂರವಾಣಿ ಕರೆಗಳನ್ನು ಸ್ವೀಕರಿಸುತ್ತಿಲ್ಲ ಎಂಬ ದೂರುಗಳು ಬಂದಿವೆ. ಮುಂದಿನ ದಿನಗಳಲ್ಲಿ ಎಲ್ಲವನ್ನು ಸರಿಪಡಿಸುವ ವ್ಯವಸ್ಥೆಯನ್ನು ಮಾಡುವುದಾಗಿ ಬಾಲಚಂದ್ರ ಜಾರಕಿಹೊಳಿ ಹೇಳಿದರು.

ವೇದಿಕೆ ಮೇಲೆಯೇ ಮತದಾರರಿಗೆ ಕೋಟಿ ನಮನ ಸಲ್ಲಿಸಿದ ಬಾಲಚಂದ್ರ ಜಾರಕಿಹೊಳಿ: 6ನೇ ಬಾರಿಗೆ ವಿಧಾನಸಭೆಗೆ ಆರಿಸಿ ಕಳುಹಿಸಿಕೊಟ್ಟ ಕ್ಷೇತ್ರದ ಸಮಸ್ತ ಮತದಾರರಿಗೆ ವೇದಿಕೆಯ ಮೇಲೆಯೇ ತಮ್ಮ ಕಾಲಲ್ಲಿದ್ದ ಪಾದರಕ್ಷೆಗಳನ್ನು ತೆಗೆದು ಶಿಸಾ ನಮಸ್ಕಾರ ಮಾಡಿದ ಅವರು, ನಾನು ಸ್ವಾಮೀಜಿಗಳನ್ನು ಬಿಟ್ಟರೆ ನನ್ನ ಕ್ಷೇತ್ರದ ಜನರಿಗೆ ನಮಿಸಿ ಅವರ ಸಹಕಾರ ಮತ್ತು ಆಶೀರ್ವಾದ ಪಡೆಯುತ್ತಿರುವುದಾಗಿ ಅವರು ತಿಳಿಸಿದರು.

ಪ್ರವಾಹ ಪೀಡಿತರಿಗೆ ಈಗಾಗಲೇ 9 ಸಾವಿರ ಮನೆಗಳನ್ನು ಸಂತ್ರಸ್ತ–ರಿಗೆ ನಿರ್ಮಿಸಿಕೊಡಲಾಗಿದೆ. ಬಾಕಿ ಉಳಿದ ಕೆಲ ಸಂತ್ರಸ್ಥ ಫಲಾನುಭವಿಗಳಿಗೆ ಮುಂದಿನ ದಿನಗಳಲ್ಲಿ ಮನೆಗಳನ್ನು ನಿರ್ಮಿಸಿಕೊಡಲು ಬದ್ಧರಿರುವುದಾಗಿ ಹೇಳಿದರು. ಕೆಲವೇ ದಿನಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಮತಗಟ್ಟೆಗಳಿಗೆ ಬಹುಮಾನಗಳನ್ನು ವಿತರಿಸಲಾಗುವುದು. ಟಾಪ್ 20 ಮತಗಟ್ಟೆಗಳನ್ನು ಗುರುತಿಸಿ ಪ್ರೋತ್ಸಾಹ ನೀಡಲಾಗುವುದು. ಮುಂದಿನ ದಿನಗಳಲ್ಲಿ ಎಲ್ಲ ಸಣ್ಣ ಪುಟ್ಟ ಸಮಾಜಗಳಿಗೂ ರಾಜಕೀಯ ಪ್ರಾಶಸ್ತ್ಯ ನೀಡಲಾಗುವುದು ಎಂದು ಹೇಳಿದರು.

ನಿಷ್ಠಾವಂತರಿಗೆ ಗೌರವ ನೀಡಲು ಮಾಲಾರ್ಪಣೆ ಸ್ವೀಕರಿಸುತ್ತಿಲ್ಲ: ನಿಷ್ಠಾವಂತ ಕಾರ್ಯಕರ್ತರಿಗೆ ಹಾಗೂ ದುಡಿದವರಿಗೆ ಗೌರವ ನೀಡಬೇಕೆನ್ನುವ ಉದ್ದೇಶದಿಂದ ನಾನು ಈ ಚುನಾವಣೆಯಲ್ಲಿ ಯಾ–ರಿಂದಲೂ ಹೂ–ಹಾರಗಳನ್ನು ಹಾಕಿಸಿಕೊಂಡಿಲ್ಲ. ಒಳ ಒಳಗೆ ವಿರೋಧ ಮಾಡಿದವರು ಮೊದಲು ಬಂದು ಮಾಲಾರ್ಪಣೆ ಮಾಡುತ್ತಿರುವುದರಿಂದ ನಿಷ್ಠಾವಂತರಿಗೆ ಅಸಮಾಧಾನವಾಗುತ್ತಿದೆ. ನಿಷ್ಠಾವಂತರನ್ನು ಗುರುತಿಸಬೇಕಾಗಿದೆ. ನಾವು ಕೂಡ ಹಂತ ಹಂತವಾಗಿ ಬದಲಾವಣೆ ಮಾಡಿಕೊಳ್ಳಬೇಕಾಗಿದೆ ಎಂದು ಶಾಸಕ ಬಾಲಚಂದ್ರ ಜಾರಕಿಹೊಳಿ ತಿಳಿಸಿದರು.

# ಶರಣು ಸಲಗರ ಗೆಲವು ಕಾರ್ಯಕರ್ತರ ಗೆಲವು: ರೂಪಾವತಿ ಜಾಧವ

ಹುಲಸೂರ : ತಾಲ್ಲೂಕಿನಲ್ಲಿ ಪತ್ರಿಕಾ ಗೋಷ್ಠಿ ಉದ್ದೇಶಿಸಿ ಮಾತನಾಡಿ ಶರಣು ಸಲಗರ ಗೆಲವು ಕಾರ್ಯಕರ್ತರ ಗೆಲವು ಎಂದು ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ಕಾರ್ಯದರ್ಶಿ ರೂಪವತಿ ಜಾಧವ ಹೇಳಿದರೂ.

ಹುಲಸೂರ ತಾಲ್ಲೂಕ ಘೋಷಣೆ ಯಾದರೂ ಇನ್ನೂ ತೊಟಗಾರಿಕೆ ಇಲಾಖೆ, ತಾಲ್ಲೂಕ ನ್ಯಾಯಾಲಯ ಸೇರಿ ಹಲವು ಇಲಾಖೆಯ ಮುಖ್ಯ ಕಚೇರಿಗಳು ಸ್ಥಾಪನೆಯಾಗಿಲ್ಲ . ಜನರು ತಮ್ಮ ಮುಖ್ಯ ಕೆಲಸಕ್ಕೆ ಸಮೀಪಲ್ಲಿರುವ ಬಸವಕಲ್ಯಾಣ ಮತ್ತು ಭಾಲ್ಕಿ ತಾಲ್ಲೂಕಿಗೆ ಹೋಗಬೇಕಾಗುತ್ತದೆ . ತಾಲ್ಲೂಕಿನಲ್ಲಿ ತಾಲ್ಲೂಕ ಪಂಚಾಯತ್, ತಹಸಿಲ ಕಚೇರಿ, ಬಿಟ್ಟರೆ ಬೇರೆ ಯಾವುದೇ ಬದಲಾವಣೆ ಆಗಿರುವುದಿಲ್ಲ. ಸರ್ಕಾರ ಇಲ್ಲಿ ತಹಶೀಲ್ ಕಚೇ–ರಿಯನ್ನು ಮಾತ್ರ ಆರಂಭಿಸಿದೆ. ಅದರಲ್ಲೂ ಸೌಲಭ್ಯಗಳಿಲ್ಲ. ಆದ–್ರಿಂದ ಇಂದಿಗೂ ಬಹುತೇ ಕರು ಕೆಲಸಗಳಿಗಾಗಿ ಬಸವಕಲ್ಯಾಣಕ್ಕೆ ಅಲೆದಾಡುತ್ತಿದ್ದಾರೆ.

ಕ್ಷೇತ್ರ ಶಿಕ್ಷಣಾಧಿಕಾರಿ ಕಚೇ–ರಿಗೆ ಕಟ್ಟಡ ಇಲ್ಲ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಒಂದು ಚಿಕ್ಕ ಕೊಠಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಕಟ್ಟಡ ನಿರ್ಮಾಣಕ್ಕೆ ಜಾಗ ಗುರುತಿಸುವ ಕೆಲಸ ಮಾಡಬೇಕಿದೆ ಎಂದು ಹೇಳಿದರು." ಮಿನಿ ವಿಧಾನಸೌಧ



ನಿರ್ಮಾಣಕ್ಕೆ ವ್ಯಕ್ತಿಯೊಬ್ಬರು 8 ಎಕರೆ ಜಮೀನನ್ನು ದಾನವಾಗಿ ನೀಡಿದ್ದಾರೆ. ಆದರೆ, ಸರ್ಕಾರ ಕಟ್ಟಡ ನಿರ್ಮಾಣಕ್ಕೆ ಅನುದಾನ ನೀಡಿಲ್ಲ.30 ವರ್ಷಗಳ ಹಿಂದೆ ನಿರ್ಮಿಸಲಾದ ಬಸ್ ನಿಲ್ದಾಣದ ಕಟ್ಟಡ ಶಿಥಿಲಾವಸ್ಥೆ ತಲುಪಿದೆ. ಆದರೂ ಸರ್ಕಾರ ಬಸ್‌ನಿಲ್ದಾಣ ನಿರ್ಮಾಣಕ್ಕೆ ಮುಂದಾಗುತ್ತಿಲ್ಲ. ಜನರು ಬಸ್‌ಗಳಿಗಾಗಿ ರಸ್ತೆ ಬದಿ ನಿಂತು ಕಾಯಬೇಕಾದ ಸ್ಥಿತಿ ಇದೆ.ತಾಲ್ಲೂಕಿನಲ್ಲಿ ಉತ್ತಮವಾದ ರಸ್ತೆಗಳಿಲ್ಲ.

ಆದರೆ ಈ ಬಾರಿ ಬಿಜೆಪಿ ಅಭ್ಯರ್ಥಿ ಶರಣು ಸಲಗರ ಶಾಸಕರಾಗಿ ಕೇವಲ 18 ತಿಂಗಳಲ್ಲಿಯೇ ಬಸವಕಲ್ಯಾಣದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳು ಮಾಡಿದ್ದಾರೆ ಹಾಗೂ ಅವರ ಪರವಾಗಿ ನೇರೆ ರಾಜ್ಯದ ಶಾಸಕ ಸಂಬಾಜಿ ಪಾಟೀಲ್ ಮತ್ತು ಕೇಂದ್ರ ರಸಾಯನಿಕ ಮಂತ್ರಿ ಭಗವಂತ ಖೂಬಾ ಸೇರಿ ಎಲ್ಲಾ ಕಾರ್ಯಕರ್ತರ ಫಲವಾಗಿ ಶಾಸಕ ಅವಧಿಯಲ್ಲಿ ಕೊಟ್ಟ ಸೇವೆಗಾಗಿ ಶರಣು ಸಲಗರ ಇವರಿಗೆ 92920 ಮತಗಳು ಪಡೆದು ಗೆಲುವಿನ ನಗೆ ಬೀರಿದ್ದಾರೆ. ಇದು ಸಣ್ಣದಲ್ಲ ಪಕ್ಷದ ಮುಖಂಡರು, ಕಾರ್ಯಕರ್ತರು ಬೆಂಬಲಿಸಿದ ಪರಿಣಾಮ ಇಷ್ಟು ಮತಗಳು ಬಂದಿವೆ. ಅಲ್ಲಲ್ಲಿ ಸಣ್ಣ–ಪುಟ್ಟ ಲೋಪ ದೋಷಗಳು ನಡೆದಿವೆ. ಮುಂದಿನ ದಿನಗಳಲ್ಲಿ ಹುಲಸುರ್ ತಾಲ್ಲೂಕಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ತಾಲ್ಲೂಕಿನಲ್ಲಿ ಪ್ರಗತಿ ಕೈಗೊಳ್ಳುತಾರೆಂದು ಭರವಸಯೊಂದಿಗೆ ನನಗೆ ಕೊಟ್ಟ ಜವಾಬ್ದಾರಿ ಪೂರ್ಣಗೊಳಿಸಿದ್ದು ಪಕ್ಷವನ್ನು ಮತ್ತಷ್ಟು ಬಲಪಡಿಸುವುದಾಗಿ ತಿಳಿಸಿದರು.

## ತೋಟಕ್ಕೆ ನುಗ್ಗಿದ ಅನೇ

ಯಮಕನಮರಡಿ: ಸಮೀಪದ ಉಳ್ಳಾಗಡ್ಡಿ ಖಾನಾಪೂರ ಹೊರವಲಯ ಮಹಾವೀರ ಅವಟೆ ತೋಟದಲ್ಲಿ ಬೆಳಿಗ್ಗೆ ಆನೆಯೊಂದು ಕಾಣಿಸಿಕೊಂಡಿದೆ.

ಹತ್ತರಗಿ ಟೋಲ್ ನಾಕಾ ಬಳಿ ಪೆಟ್ರೋಲ್ ಮಾರ್ಗದ ಇರುವ ಹೊಲಗಳಿಗ ನುಗ್ಗಿದ ಆನೆ ರೈತರ ಕಬ್ಬನ್ನು ತಿಂದಿದೆ.

ಅರಣ್ಯ ಇಲಾಖೆ ಅಧಿಕಾರಿಗಳು ಒಂಟಿ ಸಲಗವನ್ನು ಮಹಾರಾಷ್ಟ್ರ ಪಶ್ಚಿಮ ಭಾಗದ ಆಜರಾ ಗುಡ್ಡ ಪ್ರದೇಶಕ್ಕೆ ಕಳಿಸುವ ಪ್ರಯತ್ನ ಮಾಡುತ್ತಿದ್ದಾರೆ.

ಕಾರ್ಯಾಚರಣೆಯಲ್ಲಿ ಇಲಾಖೆಯ ಪ್ರಸನ್ನ ಬೆಲ್ಲದ, ವಿರೇಶ ಆದೋಲಿ ಮುಂತಾದವರು ಇದ್ದರು.

# ನಾಯಿಗಳ ದಾಳಿ; 15 ಕುರಿಗಳ ಸಾವು; 20 ಕುರಿಗಳ ಸ್ಥಿತಿ ಗಂಭೀರ



ದಾವಣಗೆರೆ: ತಾಲೂಕಿನ ಬಸವಾಪಟ್ಟಣದ ಬಳಿ ಕಂಸಾಗರ ಗ್ರಾಮದಲ್ಲಿ ಬೀದಿ ನಾಯಿಗಳು ಮಾಡಿ 15 ಕುರಿಗಳನ್ನು ಕೊಂದು ಹಾಕಿವೆ.

ನಾಯಿಗಳ ದಾಳಿಗೆ 20 ಕ್ಕೂ ಹೆಚ್ಚು ಕುರಿಗಳು ಗಂಭೀರವಾಗಿ ಗಾಯಗೊಂಡಿವೆ. ರೈತ ತಿಮ್ಮಣ್ಣ ಎಂಬುವರಿಗೆ ಸೇರಿದ ದೊಡ್ಡಿಯಲ್ಲಿ ನೂರಕ್ಕೂ ಹೆಚ್ಚು ಕುರಿಗಳಿದ್ದವು. ಮೂರರಿಂದ ನಾಲ್ಕು ಬೀದಿ ನಾಯಿಗಳು ಹಠಾತ್ತಾಗಿ ದಾಳಿ ನಡೆಸಿ ಕುರಿಗಳ ಕುತ್ತಿಗೆಗೆ ಕಚ್ಚಿ ಕೊಂದು ಹಾಕಿವೆ.

ಪಶು ವೈದ್ಯರು ಸ್ಥಳಕ್ಕಾಗಮಿಸಿ ಗಾಯಗೊಂಡ ಕುರಿಗಳಿಗೆ ಚಿಕಿತ್ಸೆ ನೀಡುತ್ತಿದ್ದಾರೆ. ಸ್ಥಳಕ್ಕೆ ಕಂದಾಯ ಇಲಾಖೆ ಅಧಿಕಾರಿಗಳು ಆಗಮಿಸಿ ನಷ್ಟಕ್ಕೀಡಾದ ರೈತನಿಗೆ ಸೂಕ್ತ ಪರಿಹಾರ ನೀಡುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ.

# ನಾಗಪುರದಿಂದ ಬಂದವರು ಮುಖ್ಯಮಂತ್ರಿ ಆಯ್ಕೆ ಮಾಡುವ ಸಂಸ್ಕೃತಿ ನಮ್ಮಲ್ಲಿಲ್ಲ: ಬಿ.ಕೆ. ಹರಿಪ್ರಸಾದ್

ಬೆಂಗಳೂರು: 'ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ವಿಚಾರದಲ್ಲಿ ಶಾಸಕರ ಅಭಿಪ್ರಾಯ ಹಾಗೂ ಹೈಕಮಾಂಡ್ ತೀರ್ಮಾನವೇ ಅಂತಿಮ. ಮುಖ್ಯಮಂತ್ರಿ ಆಯ್ಕೆಯಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಗೊಂದಲವೂ ಇಲ್ಲ' ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್ ಸ್ಪಷ್ಟನೆ ನೀಡಿದ್ದಾರೆ.




ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ಬಿಜೆಪಿಯವರಂತೆ ತಿಂಗಳುಗಳ ಕಾಲ ಮುಖ್ಯಮಂತ್ರಿ ಆಯ್ಕೆ ಮಾಡದೆ ಇರುವ ಸಂಪ್ರದಾಯ ಕಾಂಗ್ರೆಸ್ ಪಕ್ಷದಲ್ಲಿ ಇಲ್ಲ. ಶಾಸಕರ ಅಭಿಪ್ರಾಯ ತೆಗೆದುಕೊಂಡು ಮುಖ್ಯಮಂತ್ರಿ ಮಾಡುವುದು ನಮ್ಮ ಸಂಪ್ರದಾಯ. ನಾಗಪುರದಿಂದ ಬಂದವರು ಮುಖ್ಯಮಂತ್ರಿ ಆಯ್ಕೆ ಮಾಡುವ ಸಂಸ್ಕೃತಿ ನಮ್ಮಲ್ಲಿಲ್ಲ' ಎಂದು ಹರಿಪ್ರಸಾದ್, ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

'ದೇಶಕ್ಕೆ ಮಾದರಿ ಆಡಳಿತ ನೀಡುವ ವ್ಯಕ್ತಿ ಹಾಗೂ ಪಕ್ಷವನ್ನ ಉಳಿಸುವವರು ಮುಖ್ಯಮಂತ್ರಿ ಆಗಬೇಕೆಂಬುದು ನನ್ನ ಅಭಿಪ್ರಾಯ. ಹೈಕಮಾಂಡ್ ನನ್ನ ಅಭಿಪ್ರಾಯ ಕೇಳಿದರೆ ಹೇಳುತ್ತೇನೆ. ಶಾಸಕಾಂಗ ಪಕ್ಷದ ಸಭೆಯಲ್ಲಿ ಒಂದು ಸಾಲಿನ ನಿರ್ಣಯ ಕೈಗೊಳ್ಳಲಾಗಿದೆ' ಎಂದು ತಿಳಿಸಿದರು.

# ಮೂಡಲಗಿ: ಗವಿಮಠದ ರೇವಣಸಿದ್ದೇಶ್ವರ ಜಾತ್ರೆ ರಥೋತ್ಸವ

ಮೂಡಲಗಿ: ಇಲ್ಲಿಯ ಗವಿಮಠದ ರೇವಣಸಿದ್ದೇಶ್ವರ ಜಾತ್ರೆಯ ರಥೋತ್ಸವವು ಸೋಮವಾರ ದತ್ತಾತ್ರೇಯಬೋಧ ಸ್ವಾಮೀಜಿ ಹಾಗೂ ಶ್ರೀಧರಬೋಧ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಸಂಭ್ರಮದಿಂದ ಜರುಗಿತು.

ಬೆಳಿಗ್ಗೆ ರೇವಣಸಿದ್ದೇಶ್ವರ ಮೂಲ ಸನ್ನಿಧಿಗೆ ರುದ್ರಾಭಿಷೇಕ, ವಿಶೇಷ ಪೂಜೆ ಜರುಗಿತು.

ಸಂಜೆ ಗವಿಮಠದಿಂದ ಪಾಲಕಿಗಳ ಆಗಮನದ ನಂತರ ಅಲಂಕೃತ ರಥದಲ್ಲಿ ಮೂರ್ತಿ ಪ್ರತಿಷ್ಠಾಪಿಸಿ ಪೂಜೆಯನ್ನು ಸಲ್ಲಿಸಿ ಶ್ರೀಗಳು ರಥೋತ್ಸವಕ್ಕೆ ಚಾಲನೆ ನೀಡಿದರು.

ರಥೋತ್ಸವ ದಾರಿಯುದ್ದಕ್ಕೂ ಭಕ್ತರು ಹಣ್ಣು, ಹೂವು, ಕಾಯಿ, ಬತ್ತಾಸು ಅರ್ಪಿಸಿದರು.

ವಿವಿಧ ವಾದ್ಯಗಳ ವಾದನ, ಕುದರೆ, ನವಿಲು ಕುಣಿತವು ಗಮನಸೆಳೆದವು. ಮೂಡಲಗಿ ಸೇ–ರಿದಂತೆ ಕಮಲದಿನ್ನಿ, ಶಿವಾಪುರ, ಹಳ್ಳೂರ, ರಂಗಾಪುರ, ಗುರ್ಲಾಪುರ ಗ್ರಾಮಗಳಿಂದ ಭಕ್ತರು ಸೇರಿದ್ದರು.

# ರಾಹುಲ್ ಗಾಂಧಿ ಮತ್ತು ಖರ್ಗೆ ರಹಸ್ಯ ಸಭೆ



ನವದೆಹಲಿ: ಕರ್ನಾಟಕ ಮುಖ್ಯಮಂತ್ರಿ ಆಯ್ಕೆ ಸಂಬಂಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ ರಹಸ್ಯ ಸಭೆ ನಡೆದಿದ್ದು, ಈ ವೇಳೆ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಕೂಡ ಹಾಜರಿದ್ದರು.

ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳಾಗಿರುವ ಸಿದ್ದರಾಮಯ್ಯ ಹಾಗೂ ಡಿ.ಕೆ ಶಿವಕುಮಾರ್ ಇಬ್ಬರೂ ಸದ್ಯ ದೆಹಲಿಯಲ್ಲಿದ್ದು, ಉಭಯ ನಾಯಕರ ಜತೆ ಸಭೆ ನಡೆಸಿ ಹೈಕಮಾಂಡ್ ನಾಯಕರು ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ.

ಶನಿವಾರ ರಾತ್ರಿ ಬೆಂಗಳೂರಿನಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ, ಮುಂದಿನ ಮುಖ್ಯಮಂತ್ರಿ ಯಾರಾಗಬೇಕು ಎಂಬುದರ ಬಗ್ಗೆ ಶಾಸಕರ ಅಭಿಪ್ರಾಯ ಸಂಗ್ರಹಿಸಲಾಗಿದೆ.

ಅಭಿಪ್ರಾಯ ಸಂಗ್ರಹಿಸಿರುವ ವೀಕ್ಷಕರು ಮಲ್ಲಿಕಾರ್ಜುನ ಖರ್ಗೆ ಅವರಿಗೆ ವರದಿ ಸಲ್ಲಿಸಿದ್ದಾರೆ.

## ಕುರಿ ಮತ್ತು ಆಡು ಸಾಕಾಣಿಕೆಯ 10 ದಿನಗಳ ತರಬೇತಿ

ಬೆಳಗಾವಿ: ಬೆಳಗಾವಿ ಜಿಲ್ಲೆಯ ಗ್ರಾಮೀಣ ಪ್ರದೇಶದ ಯುವಕ–ರಿಗೆ, ನಿರುದ್ಯೋಗಿಗಳಿಗೆ, ಮತ್ತು ಮಹಿಳಾ ನಿರುದ್ಯೋಗಿಗಳಿಗೆ ಕುರಿ ಮತ್ತು ಆಡು ಸಾಕಾಣಿಕೆಯ 10 ದಿನಗಳ ತರಬೇತಿಯನ್ನು ಮೇ.22 2023 ರಿಂದ ಹಮ್ಮಿಕೊಳ್ಳಲಾಗಿದೆ.

ತರಬೇತದಾರರಿಗೆ ಇರಬೇಕಾದ ಅರ್ಹತೆಗಳು: 18 ರಿಂದ 45 ವಯಸ್ಸಿನವರಾಗಿರಬೇಕು, ಗ್ರಾಮೀಣ ಪ್ರದೇಶದವರಾಗಿರಬೇಕು, BPL/ಜಾಬ್ ಕಾರ್ಡ ಹೊಂದಿರಬೇಕು.

ನೀಡಬೇಕಾದ ದಾಖಲೆಗಳು:– BPL/ ಜಾಬ್ ಕಾರ್ಡ, ಆದ–ಾರ ಕಾರ್ಡ, ಬ್ಯಾಂಕ ಪಾಸ್ ಬುಕ್ಕ ಹಾಗೂ ಭಾವಚಿತ್ರಗಳು. ತರಬೇತಿಯು ಊಟ ಮತ್ತು ವಸತಿಯೊಂದಿಗೆ ಸಂಪೂರ್ಣ ಉಚಿತವಾಗಿರುತ್ತದೆ.

ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ ಮೇ.20 2023 ಆಗಿರುತ್ತದೆ. ಅರ್ಜಿಯನ್ನು ಸಂಸ್ಥೆಯ ಅರ್ಜಿ ನಮೂನೆಯಲ್ಲಿ ಅಥವಾ ಬಿಳಿಹಾಳಿಯಲ್ಲಿ ನೇರವಾಗಿ ಕಾರ್ಯಾಲಯಕ್ಕೆ, ಪೋಸ್ಟ್ ಮುಖಾಂತರ ಅಥವಾ ಇಮೇಲ್‌ಗೆ ಕಳುಹಿಸಬಹುದು.

ಸಂಸ್ಥೆಯ ವಿಳಾಸ:– ಕೆನರಾ ಬ್ಯಾಂಕ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ (ಸಿಬಿ ಆರ್‌ಸೆಟಿ), ಪ್ಲಾಟ ನಂ. ಸಿ ಎ –03 (ಪಾರ್ಟ) ಕಣಬರ್ಗಿ ಇಂಡಸ್ಟ್ರಿಯಲ್ ಎರಿಯಾ, ಆಟೋ ನಗರ. ಬೆಳಗಾವಿ – 590015.

ದೂರವಾಣಿ ಸಂಪರ್ಕ ಸಂಖ್ಯೆ:– 0831–2440644, 8296792166, 9845750043, 8050406866, 8867388906, 9449860564 Email: cbrsetibelagavi@gmail.com ಬೆಳ್ಳಿಗ್ಗೆ 9.30 ರಿಂದ ಸಂಜೆ 6 ರವರೆಗೆ ಸಂಪರ್ಕಿಸಬಹುದು ಎಂದು ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಕರ್ನಾಟಕ ಸರ್ಕಾರ – ಜಿಲ್ಲಾ ಪಂಚಾಯತ ಬೆಳಗಾವಿ**
**ತಾಲೂಕಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಬೆಳಗಾವಿ ಶ್ರೀ ಡಿ.ದೇವರಾಜ ಅರಸು ಭವನ, ಸುಭಾಷ ನಗರ ಬೆಳಗಾವಿ**
**ದೂರವಾಣಿ ಸಂಖ್ಯೆ:0831–2405692 E-mail:bceobgm0@gmail.com**
**ಸಂ:ಹಿಂವಕಇಬೆ/ವಾ.ಟೆ/ಸಿಆರ್– /2023–24 ದಿನಾಂಕ: 15–05–2023**

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ತಾಲೂಕಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಾರ್ಯಾಲಯ ಬೆಳಗಾವಿ ತಾಲ್ಲೂಕು, ಬೆಳಗಾವಿ ಜಿಲ್ಲೆ ರವರಿಗೆ ಅಧಿಕೃತ ಕೆಲಸ ಕಾರ್ಯಗಳಿಗಾಗಿ ಮಾಸಿಕ ಬಾಡಿಗೆ ಆಧಾರದಲ್ಲಿ ವಾಹನ ಸರಬರಾಜು ಮಾಡಲು ಟೆಂಡರ್ ಆಹ್ವಾನ

**ಉಲ್ಲೇಖ:**1.ಸರ್ಕಾರದ ಪತ್ರ ಸಂಖ್ಯೆ: ಹಿಂವಕ 124 ಬಿಇಟಿ 2022 ದಿ: 13.07.2022, 2.ಸರ್ಕಾರದ ಆದೇಶ ಸಂಖ್ಯೆ: ಸಿಅಸುಇ 30 ಶಿವಾನಿ 2019, ದಿ:31.03.2022,3.ಸರ್ಕಾರದ ಆದೇಶ ಸಂಖ್ಯೆ: ಹಿಂವಕಇ 534 ಬಿಇಟಿ, ಬೆಂಗಳೂರು ದಿ:28–11–2017. 4.ಸರ್ಕಾರದ ಆದೇಶ ಸಂಖ್ಯೆ: 772122 ಃCWD-11050/5/2022-BCWD ದಿನಾಂಕ:06.08.2022.

ಬೆಳಗಾವಿ ಜಿಲ್ಲೆಯ, ತಾಲೂಕಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿಯ ಅಧಿಕೃತ ಸರ್ಕಾರಿ ಕೆಲಸ ಕಾರ್ಯಗಳಿಗಾಗಿ ಒಂದು ವರ್ಷದ ಅವಧಿಗೆ, ಅಂದರೆ ಜೂನ–2023 ರಿಂದ ಮಾರ್ಚ–2024 ರವರೆಗೆ ಹೊರಗುತ್ತಿಗೆ ಆಧಾರದ ಮೇಲೆ ಚಾಲಕ ಸಹಿತ ವಾಹನಗಳನ್ನು ಒದಗಿಸಲು ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಆಸಕ್ತ ಟೆಂಡರುದಾದರು ತಾಲೂಕಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ ಬೆಳಗಾವಿ ತಾಲ್ಲೂಕು ಬೆಳಗಾವಿ ಜಿಲ್ಲೆ ಇಲ್ಲಿಂದ ನಿಗದಿತ ಶುಲ್ಕವನ್ನು ಪಾವತಿಸಿ ಅರ್ಜಿಗಳನ್ನು ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

1:ಟೆಂಡರ್ ಪ್ರಕಟಣೆ ದಿನಾಂಕ:15–05–2023, 2:ಟೆಂಡರ್ ಅರ್ಜಿಗಳನ್ನು ವಿತರಣೆ ಮಾಡುವ ದಿನಾಂಕ: 15-05-2023 to 29-05-2023, 4.00 pm, 3:ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಸಮಯ 29–05–2023, 4:00pm, 4:ತಾಂತ್ರಿಕ ಬಿಡ್ ತೆರೆಯುವ ದಿನಾಂಕ 29–05–2023, 4:30pm, 5:ಆರ್ಥಿಕ ಬಿಡ್ ತೆರೆಯುವ ದಿನಾಂಕ 29–05–2023, 5:30pm, 6:ಅರ್ಜಿ ಶುಲ್ಕ (ರೂ):500/–, 7:ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ (ರೂ): 3,50,000/–, 8:ಪಾವತಿಸಬೇಕಾದ ಎ.ಎಂ.ಡಿ ಮೊತ್ತ (ರೂ) (2.5%):8,750/–

ಸಹಿ/–ತಾಲೂಕಾ ಹಿಂದುಳಿದ ವರ್ಗಗಳ, ಕಲ್ಯಾಣಾಧಿಕಾರಿಗಳು, ಬೆಳಗಾವಿ.

DIPR/BGM/RO-NO-13/KSMCA/2023-24

**ಕರ್ನಾಟಕ ಸರ್ಕಾರ**
**ಗ್ರಾಮೀಣಾಭಿವೃದ್ಧಿ ಪಂಚಾಯತ ರಾಜ್ ಇಲಾಖೆ**
**ಜಿಲ್ಲಾ ಪಂಚಾಯತಿ ಬೆಳಗಾವಿ, ತಾಲೂಕು ಪಂಚಾಯತಿ ಬೆಳಗಾವಿ.**
**ಗ್ರಾಮ ಪಂಚಾಯತ, ಕಂಗ್ರಾಳಿ ಖುರ್ದ**

**ಟೆಂಡರ್ ಸಂಖ್ಯೆ: ಗ್ರಾಪಂ/15ನೇಹಣಕಾಸು/ಟೆಂಡರ್/2023–24/01 ದಿನಾಂಕ: 15–05–2023**

**ಅಲ್ಪಾವಧಿ ಟೆಂಡರ್ ಪ್ರಕಟಣೆ**

1. **ಟೆಂಡರ್ ಪ್ರಕಟಣೆ ಸಂಖ್ಯೆ** : ಗ್ರಾಪಧ/15ನೇ ಹಣಕಾಸು/ಟೆಂಡರ್/2023–24/01 ದಿನಾಂಕ:17–05–2023
2. **ಅಂದಾಜು ಮೌಲ್ಯ** : ರೂ. 2825000/–
3. **ಟೆಂಡರ್ ಪ್ರಕಟಣೆ** : ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲೂಕಿನ ಗ್ರಾಮ ಪಂಚಾಯತ ಕಂಗ್ರಾಳಿ ಕೆ.ಎಚ್. ಗ್ರಾಮ ಪಂಚಾಯತಿ ವ್ಯಾಪ್ತಿಯ ಕಂಗ್ರಾಳಿ ಕೆ.ಎಚ್. ಮತ್ತು ಅಲತಗಾ ಗ್ರಾಮಗಳ ಸನ್ 2022–23 ನೇ ಸಾಲಿನ 15ನೇ ಹಣಕಾಸು ಯೋಜನೆಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅರ್ಹ ಗುತ್ತಿಗೆದಾರ–ರಿಂದ ಬಿಡ್ಡುಗಳನ್ನು ಆಹ್ವಾನಿಸಿದೆ.
4. **ಟೆಂಡರ್ ವಿಧಾನ:** ಮ್ಯಾನ್ಯುಯಲ್ ಟೆಂಡರ್ ದ್ವಿ ಲಕೋಟೆ ಪದ್ಧತಿ–ತಾಂತ್ರಿಕ ಮತ್ತು ಆರ್ಥಿಕ ಬಿಡ್ಡುಗಳು
5. **ಟೆಂಡರ್ ದಾಖಲಾತಿಗಳು** : ಟೆಂಡರ್ ದಾಖಲಾತಿಗಳನ್ನು ಗ್ರಾಮ ಪಂಚಾಯತ ಕಂಗ್ರಾಳಿ ಕೆ.ಎಚ್. ಮುಕ್ಕಾ,ಪೋ: ಕಂಗ್ರಾಳಿ ಕೆ.ಎಚ್. ತಾಲೂಕ ಬೆಳಗಾವಿ ಜಿಲ್ಲೆ ಬೆಳಗಾವಿ ಪೀನ್ ಕೋಡ ಸಂಖ್ಯೆ. 590010 ನಿಂದ ಪಡೆಯಬಹುದು.
6. **ಟೆಂಡರ್ ವೇಳಾಪಟ್ಟಿ:**

| ಕ್ರಸಂಖ್ಯೆ | ವಿವರಗಳು | ದಿನಚರಿ |
|---|---|---|
| 1. | ಟೆಂಡರ್ ದಾಖಲಾತಿಗಳನ್ನು ಪಡೆಯಲು ಅವಧಿ | ದಿನಾಂಕ 20–05–2023 ರಿಂದ 24–05–2023 ರ ಸಂಜೆ 3–00 ಘಂಟೆವರೆಗೆ (ಕಛೇರಿ ಅವಧಿಯಲ್ಲಿ) |
| 2. | ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ 25/05/2023 ಮಧ್ಯಾಹ್ನ 3–00 ಘಂಟೆಯ ವರೆಗೆ ದಿನಾಂಕ |
| 3. | ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ | 30/05/2023 ಮದ್ಯಾಹ್ನ 3–30 ಘಂಟೆಗೆ |
| 4. | ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ ಮತ್ತು ಸಮಯ. | ದಿನಾಂಕ 30/05/2023 ರ ಸಂಜೆ 4–30 ರಿಂದ |

**ಕಾಮಗಾರಿಗಳ ವಿವರ**

| ಕ್ರಸಂಖ್ಯೆ | ಗ್ರಾಮದ ಹೆಸರು | ಕಾಮಗಾರಿ ವಿವರಗಳು | ನಿಗದಿಪಡಿಸಿರುವ ಮೊತ್ತ |
|---|---|---|---|
| 1. | ಕಂಗ್ರಾಳಿ ಕೆ.ಎಚ್. | ಕಂಗ್ರಾಳಿ ಕೆ.ಎಚ್. ಕಂಗ್ರಾಳಿ ಕೆ. ಎಚ್. ಗ್ರಾಮದ ಸಾರಥಿ ನಗರದ ಆಶ್ರಯ ಕಾಲನಿಯಲ್ಲಿ ಅಂಬೇಡ್ಕರ ಭವನ ನಿರ್ಮಾಣ ಮಾಡುವುದು(ಪ.ಜಾತಿ/ಪ.ಪಂಗಡ) | 300000 |
| 2. | ಕಂಗ್ರಾಳಿ ಕೆ.ಎಚ್. | ಕಂಗ್ರಾಳಿ ಕೆ.ಎಚ್. ಗ್ರಾಮದ ಸಾರಥಿ ನಗರದ ಶಿವಾಲಯ ರಸ್ತೆ ಪಕ್ಕದಲ್ಲಿ ಪೇವರ್ಸ ಅಳವಡಿಸುವುದು. | 200000 |
| 3. | ಅಲತಗಾ | ಅಲತಗಾ ಗ್ರಾಮದ ಮಾರುತಿ ಬಾಳು ಪಾಟೀಲ ಮನೆಯಿಂದ ಅಶೋಕ ಟಕ್ಕೇಕರ ಇವರ ಮನೆಯವರೆಗೆ ಸಿ ಸಿ ಚರಂಡಿ ನಿರ್ಮಾಣ ಮಾಡುವುದು. | 400000 |
| 4. | ಕಂಗ್ರಾಳಿ ಕೆ.ಎಚ್. | ಕಂಗ್ರಾಳಿ.ಕೆ.ಎಚ್. ಗ್ರಾಮದ ಮಹಾತ್ಮಾ ಮಾರುತಿ ಬೆನ್ನಾಳಕರ ಮಾರ್ಗ ಭಂಡಾರಿ ಮನೆಯಿಂದ ಕಲ್ಲಪ್ಪಾ ಪಾಟೀಲ ಇವರ ಅಂಗಡಿಯವರೆಗೆ ಸಿ ಸಿ ರಸ್ತೆ ನಿರ್ಮಾಣ ಮಾಡುವುದು. | 525000 |
| 5. | ಕಂಗ್ರಾಳಿ ಕೆ.ಎಚ್. | ಕಂಗ್ರಾಳಿ.ಕೆ.ಎಚ್. ಗ್ರಾಮದ ಮಹಾತ್ಮಾ ಮಾರುತಿ ಬೆನ್ನಾಳಕರ ಮಾರ್ಗ ಭಂಡಾರಿ ಮನೆಯಿಂದ ಕಲ್ಲಪ್ಪಾ ಪಾಟೀಲ ಇವರ ಅಂಗಡಿಯವರೆಗೆ ಸಿ ಸಿ ರಸ್ತೆ ನಿರ್ಮಾಣ ಮಾಡುವುದು. | 300000 |
| 6. | ಕಂಗ್ರಾಳಿ ಕೆ.ಎಚ್. | ಕಂಗ್ರಾಳಿ.ಕೆ.ಎಚ್. ಗ್ರಾಮದ ಸಾವಂತ ಇವರ ಮನೆಯಿಂದ ಶಾಂತಾರಾಮ ಮನೆಯವರೆಗೆ ಸಿ ಸಿ ರಸ್ತೆ ನಿರ್ಮಾಣ ಮಾಡುವುದು. | 200000 |
| 7. | ಕಂಗ್ರಾಳಿ ಕೆ.ಎಚ್. | ಕಂಗ್ರಾಳಿ.ಕೆ.ಎಚ್. ಗ್ರಾಮದ ಆನಂದ ನೀಲಜಕರ ಮನೆಯಿಂದ ಚಕ್ಕರ ಲೈನ್ ವರೆಗೆ ಸಿ ಸಿ ರಸ್ತೆ ನಿರ್ಮಾಣ ಮಾಡುವುದು. | 100000 |
| 8. | ಕಂಗ್ರಾಳಿ ಕೆ.ಎಚ್. | ಕಂಗ್ರಾಳಿ.ಕೆ.ಎಚ್. ಗ್ರಾಮದ ಮೋಹನಗೆಕರ ಮನೆಯಿಂದ ಮಸ್ಣಾಯಿ ದೇವಸ್ಥಾನದವರೆಗೆ ಪೇವರ್ಸ್ ರಸ್ತೆ ನಿರ್ಮಾಣ ಮಾಡುವುದು. | 200000 |
| 9. | ಕಂಗ್ರಾಳಿ ಕೆ.ಎಚ್. | ಕಂಗ್ರಾಳಿ.ಕೆ.ಎಚ್. ಗ್ರಾಮದ ದ್ರವ ತ್ಯಾಜ್ಯ ನಿರ್ವಹಣೆ (ಎಲ್ ಡಬ್ಲು ಎಮ್ ) ಗಾಗಿ ಕಾಯ್ದಿರಿಸಿದ ಮೊತ್ತ | 600000 |
| ಒಟ್ಟು | | | 2825000 |

–/ಸಹಿ/–
**ಅಧ್ಯಕ್ಷರು ಗ್ರಾಮ ಪಂಚಾಯತ ಕಂಗ್ರಾಳಿ ಕೆ.ಎಚ್.**

–/ಸಹಿ/–
**ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತ ಕಂಗ್ರಾಳಿ ಕೆ.ಎಚ್.**

## ಪ್ರಥಮ ಸೆಮಿಸ್ಟರ್ ಪ್ರವೇಶಕ್ಕೆ ಅರ್ಜಿ ಆಹ್ವಾನ

ಬೆಳಗಾವಿ: ಬೆಳಗಾವಿಯ ಅನುದಾನಿತ ಮೋತಿಚಂದ ಲೆಂಗಡೆ ಭರತೇಶ ಪಾಲಿಟೆಕ್ನಿಕ್ ವಿದ್ಯಾಲಯದ 2023–24 ನೇ ಸಾಲಿಗೆ ಪ್ರಥಮ ವರ್ಷ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

2023–24ನೇ ಸಾಲಿಗೆ ತಾಂತ್ರಿಕ ಅಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು ಇವರ ಅಧಿಸೂಚನೆಯನ್ವಯ ಅನುದಾನಿತ ಡಿಪ್ಲೋಮಾ ಮೆಕ್ಯಾನಿಕಲ್ ಮತ್ತು ಅಟೋಮೋಬೈಲ್ ಇಂಜಿನಿಯರಿಂಗ್ ಕೋರ್ಸುಗಳಿಗೆ ಪುಥಮ ಸೆಮಿಸ್ಟರ್ ಪ್ರವೇಶಕ್ಕೆ ಎಸ್.ಎಸ್.ಎಲ್.ಸಿ. ಪಾಸಾದ ಕರ್ನಾಟಕದ ಅರ್ಹ ಅಭ್ಯರ್ಥಿಗಳಿಗೆ ಮೊದಲು ಬಂದವರಿಗೆ ಮೊದಲ ಆದ್ಯತೆಯ ಮೇರೆಗೆ ಪ್ರವೇಶ ನೀಡಲು ಅರ್ಜಿ ಅಹ್ವಾನಿಸಿದ್ದು, ಮೇ.5 2023 ಕೊನೆಯ ದಿನಾಂಕವಾಗಿರುತ್ತದೆ. ಆಸಕ್ತ ಹೊಂದಿದ ಅಭ್ಯರ್ಥಿಗಳು ಕೂಡಲೇ ಬಂದು ಅಗತ್ಯವಾದ ಮೂಲ ದಾಖಲೆಗಳೊಂದಿಗೆ ಪ್ರವೇಶ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 9448631499 ಗೆ ಸಂಪರ್ಕಿಸಬಹುದು ಎಂದು ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## RRI-EAB ಯ ವಾರ್ಷಿಕೋತ್ಸವದ ಅಂಗವಾಗಿ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆ

ಬೆಳಗಾವಿ: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ರಾಮನ್ ಸಂಶೋಧನಾ ಸಂಸ್ಥೆಯ (RRI) ಎಪ್ಪತ್ತೈದನೇ ವಾರ್ಷಿಕೋತ್ಸವ ಹಾಗೂ ಬೆಂಗಳೂರು ಪರಿಸರ ಸಂಘದ (EAB) ಇಪ್ಪತ್ತೈದನೇ ವಾರ್ಷಿಕೋತ್ಸವದ ಅಂಗವಾಗಿ ಪದವಿ ಮತ್ತು ಸ್ನಾತಕೋತ್ತರ ವಿಜ್ಞಾನ ವಿದ್ಯಾರ್ಥಿಗಳಿಗಾಗಿ "Urban Management and Water Conservation" ವಿಷಯದ ಬಗ್ಗೆ ಒಂದು ದಿನದ ಕಾರ್ಯಾಗಾರವನ್ನು ಆನ್‌ಲೈನ್ ಮೂಲಕ ಆಯೋಜಿಸಲಾಗುತ್ತಿದೆ.

ಸದರಿ ಕಾರ್ಯಾಗಾರದಲ್ಲಿ "ಸುಸ್ಥಿರ ಭವಿಷ್ಯಕ್ಕಾಗಿ ಹಸಿರು ನಗರಗಳು (Green Cities for Sustainable Future)" ವಿಷಯದ ಮೇಲೆ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿದ್ದು, ಪ್ರಬಂಧಗಳನ್ನು ಪದವಿ ಮತ್ತು ಸ್ನಾತಕೋತ್ತರ ವಿಜ್ಞಾನ ವಿದ್ಯಾರ್ಥಿಗಳು ಬರೆದು ಕಳುಹಿಸಲು ಜೂನ್.1, 2023 ಕೊನೆಯ ದಿನವಾಗಿರುತ್ತದೆ.

ಪ್ರಬಂಧವನ್ನು ಕಳುಹಿಸಲು ಪಾಲಿಸಬೇಕಾದ ನಿಯಮ ಮತ್ತು ಷರತ್ತುಗಳು:

ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಪ್ರಬಂಧಗಳನ್ನು ಬರೆಯಬಹುದು. ಒಬ್ಬರು ಒಂದು ಭಾಷೆಯಲ್ಲಿ ಪ್ರಬಂಧವನ್ನು ಬರೆಯಲು ಅವಕಾಶವಿರುತ್ತದೆ.

ಒಂದು ವೇಳೆ ಎರಡು ಭಾಷೆಗಳಲ್ಲಿ ಬರೆದರೆ, ಒಂದನ್ನು ನಮ್ಮ ವಿವೇಚನೆಯಂತೆ ಆಯ್ಕೆಮಾಡಿಕೊಂಡು ಮೌಲ್ಯಮಾಪನವನ್ನು ಮಾಡಲಾಗುವುದು.\ಪ್ರಬಂಧಗಳು 1000 ಪದಗಳನ್ನು ಮೀರುವಂತಿಲ್ಲ.

ಇಂಗ್ಲೀಷ್‌ನಲ್ಲಿ ಬರೆಯುವವರು – ಂಡುಚಿಟ ಈಂಟಿಣ 14 ಖುದಜ ಬಳಸಬೇಕು.

ಕನ್ನಡದಲ್ಲಿ ಬರೆಯುವವರು– Unicode 12 size ನಲ್ಲಿ ಮಾತ್ರ ಕಳುಹಿಸುವುದು.

ಕೃತಿ ಚೌರ್ಯ (Plagiarism) ತಿರಸ್ಕರಿಸಲಾಗುವುದು.

ಪ್ರಬಂಧದ ಜೊತೆಯಲ್ಲಿ ಕಾಲೇಜಿನ ಗುರುತಿನ ಚೀಟಿಯನ್ನು ಕಳುಹಿಸಬೇಕು. ಸ್ಪರ್ಧೆಯಲ್ಲಿ ಭಾಗವಹಿಸುವ ಎಲ್ಲಾ ಪ್ರತಿನಿಧಿಗಳಿಗೂ ಇ–ಸರ್ಟಿಫಿಕೆಟ್ ನೀಡಲಾಗುವುದು ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಘೋಡಗೇರಿ: ಯುವಕ ಕಾಣೆ



ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲೂಕಿನ ಘೋಡಗೇರಿ ಗ್ರಾಮದ ಸಂಜೀವ ಶಿವಾನಂದ ಗೆಲ್ಲನವರ್ ಈತನು ರವಿವಾರ ದಿನಾಂಕ: 09/05/2023 ರಂದು ಮದ್ಯಾಹ್ನ 1 ಘಂಟೆಗೆ ಮನೆಯಿಂದ ಹೋಗಿದ್ದಾನೆ.

ಪತ್ನಿ ಹಾಗೂ ಮಕ್ಕಳನ್ನು ಬಿಟ್ಟು ಇವತ್ತಿಗೆ ಒಂದು ವಾರದ ಕಳೆದರೂ ಮನೆಗೆ ಬಾರದೆ ಇರುವುದರಿಂದ ಮನೆಯವರೆಲ್ಲರೂ ತನ್ನ ಎಲ್ಲ ಸಂಬಂಧಿಕರ ಮನೆ ಉರೂ ಎಲ್ಲ ಕಡೆಗೆ ಹುಡುಕಾಡಿ.

ಸಿಗದೆ ಇದ್ದ ಕಾರಣ ಇವತ್ತು ಹುಕ್ಕೇರಿ ಪೊಲೀಸ್ ಠಾಣೆಯಲ್ಲಿ. ದೂರು ದಾಖಲಿಸಲಾಗಿದೆ.

ದಯಮಾಡಿ ಎಲ್ಲಿಯಾದರೂ ಈ ವ್ಯಕ್ತಿ ಕಂಡುಬಂದರೆ. ಹುಕ್ಕೇರಿ ಪೋಲಿಸ್ ಠಾಣೆಗೆ ಅಥವಾ ಅವರ ಸಂಬಂಧಿಸಿದವರಿಗೆ ಈ ನಂಬರಗೆ ಕರೆಮಾಡಿ...

7026151422 – 8747075982ದುಂಡು ಮುಖ ಗೋದಿ ಬಣ್ಣ ಚಿಗುರು ಮಿಸೇ ಡಾರ್ಕ ಗುಲಾಬಿ ಶರ್ಟ ಧರಿಸಿರುತ್ತಾನೆ ಪತ್ತೆಯಾದಲ್ಲಿ ಯಮಕನಮರಡಿ ಪೋಲಿಸ್ ಠಾಣೆಗೆ ಮಾಹಿತಿ ನೀಡಲು ಕೊರಿದ್ದಾರೆ. 0833327333.

## ಭಯದ ವಾತಾವರಣ ಸೃಷ್ಟಿಸಬೇಡಿ: ಇ.ಡಿ.ಗೆ ಸುಪ್ರೀಂ ಕೋರ್ಟ್ ಸೂಚನೆ

ನವದೆಹಲಿ: ಭಯದ ವಾತಾವರಣ ಸೃಷ್ಟಿ ಮಾಡಬೇಡಿ ಎಂದು ಜಾರಿ ನಿರ್ದೇಶನಾಲಯಕ್ಕೆ ಸುಪ್ರೀಂ ಕೋರ್ಟ್ ಹೇಳಿದೆ.

ಛತ್ತೀಸ್‌ಗಢ ಅಬಕಾರಿ ಹಗರಣಲ್ಲಿ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರನ್ನು ಸಿಲುಕಿಸಿ ಹಾಕಲು ಜಾರಿ ನಿರ್ದೇಶನಾಲಯ ಪ್ರಯತ್ನಿಸುತ್ತಿದೆ ಎಂದು ರಾಜ್ಯ ಸರ್ಕಾರ ವಿಚಾರಣೆ ವೇಳೆ ಆರೋಪಿಸಿದೆ. ಈ ವೇಳೆ ಸುಪ್ರೀಂ ಕೋರ್ಟ್ ಹೀಗೆ ಹೇಳಿದೆ.

ಛತ್ತೀಸ್‌ಗಢ ಸರ್ಕಾರದ ಪರವಾಗಿ



ಹಾಜರಾದ ಹಿರಿಯ ವಕೀಲ ಕಪಿಲ್ ಸಿಬಲ್, ಜಾರಿ ನಿರ್ದೇಶನಾಲಯವು ಅಬಕಾರಿ ಅಧಿಕಾರಿಗಳಿಗೆ ಬೆದರಿಸುತ್ತಿದೆ ಎಂದು ಹೇಳಿದರು.

ಜಾರಿ ನಿರ್ದೇಶನಾಲಯವು ತಮ್ಮ ಕುಟುಂಬದ ಸದಸ್ಯರಿಗೆ ಬೆದರಿಸುತ್ತಿದೆ ಹಾಗೂ ಬಂಧಿಸುತ್ತೇವೆ ಎಂದು ಹೇಳುತ್ತಿದೆ ಎಂದು ಹಲವು ಅಬಕಾರಿ ಅಧಿಕಾರಿಗಳು ದೂರಿದ್ದಾರೆ ಎಂದು ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಹೇಳಿದೆ.

ಈ ವೇಳೆ, 'ಭಯದ ವಾತಾವರಣ ಸೃಷ್ಟಿ ಮಾಡಬಾರದು' ಎಂದು ಕೋರ್ಟ್ ಮೌಖಿಕವಾಗಿ ಜಾರಿ ನಿರ್ದೇಶನಾಲಯಕ್ಕೆ ಹೇಳಿದೆ. ಸಣ್ಣ ನಡೆ ಕೂಡ ನೀವು ಹೀಗೆ ಮಾಡುತ್ತಿದ್ದೀರಿ ಎಂದು ಅಂದುಕೊಳ್ಳುವುದಕ್ಕೆ ಎಡೆ ಮಾಡಿಕೊಡುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

## ಪರಮಪೂಜ್ಯರ ನಮಸ್ಕರಿಸಿ ಯೋಗ ಕ್ಷೇಮ ವಿಚಾರಣೆ

ಬೆಳಗಾವಿ: ಬೆಳಗಾವಿ ಹುಕ್ಕೇರಿ ಹಿರೇಮಠದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಅವರು ಬೆಳಗಾವಿಯಿಂದ ಗುಳೆದಗುಡ್ಡಕ್ಕೆ ಸಂಚರಿಸುವ ಮಾರ್ಗ ಮಧ್ಯದಲ್ಲಿ ಗುಳೆದಗುಡ್ಡಕ್ಕೆ ಕಾರ್ಯಕ್ರಮಕ್ಕೆ ಬಂದಿದ್ದ ಮೈಸೂರು ರಾಜ ಮನೆತನದ ಮಹಾರಾಜರಾದ ಯಧುವೀರ ಒಡೆಯರು ಪರಮಪೂಜ್ಯರನ್ನು ನಮಸ್ಕರಿಸಿ ಯೋಗ ಕ್ಷೇಮ ವಿಚಾರಿಸಿದರು.

ಈ ಸಂದರ್ಭದಲ್ಲಿ ಶ್ರೀಗಳು ರಚಿಸಿದ ವಚನ ಕಾರಂಜಿ ಹಾಗೂ ಅಭಿನಂದನ ಗ್ರಂಥ, ಸಮನ್ವಯ ಶಿಖರ, ದೇವಿ ಪಾರಾಯಣ ಹಾಗೂ ಬೆಳಗಾವಿ ಕುಂದಾ ನೀಡಿ ಶ್ರೀಗಳು ಯಧುವೀರ ಒಡೆಯರ ಅವರನ್ನು ಗೌರವಿಸಿದರು.

ಈ ಸಂದರ್ಭದಲ್ಲಿ ಅತೀ ಸಂತೋಷಗೊಂಡ ಮಹಾರಾಜರು, ಹುಕ್ಕೇರಿ ಹಿರೇಮಠಕ್ಕೆ ನಾನು ಬರಬೇಕಾಗಿದೆ. ಆದಷ್ಟು ಬೇಗ ಬರುತ್ತೇನೆ ಸ್ವಾಮೀಜಿ ಎಂದು ಅಭಿಮಾನದಿಂದ ನುಡಿದರು.

ಶ್ರೀಗಳು ಮಾತನಾಡಿ,ರಾಜರು ಹೇಗಿದ್ದರೂ ಎಂದು ನಮ್ಮ ಜನ ನೋಡುತ್ತಿರುತ್ತಾರೆ. ಆದರೆ ಮಹಾರಾಜರು ಇಷ್ಟು ಸರಳವಾಗಿ ಇರುತ್ತಾರೆ ಎನ್ನುವುದು ಯಧುವೀರ ಒಡೆಯರ ಅವರನ್ನು ನೋಡಿ ತಿಳಿಯಬಹದು ಎಂದು ಅತೀ ಸಂತೋಷದಿಂದ ಶ್ರೀಗಳು ಮಹಾರಾಜರಿಗೆ ಮಂಗಲಾಶೀರ್ವಾದ ಮಾಡಿದರು.



ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಬಿಸಿಯೂಟ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟದ ಸದಸ್ಯರಾದ ಶ್ರೀಧರ ಶೆಟ್ಟರ್, ಕಾರ್ಯದರ್ಶಿ ಕೆ.ಭೀಮಾ, ಸದಸ್ಯರಾದ ಅಪ್ಪಾಜಿ ಗೌಡರ, ರವೀಂದ್ರ ಹಾಗೂ ಎಂ.ಕೆ. ಹುಬ್ಬಳ್ಳಿಯ ಸಮರ್ಥ ಸೇವಾ ಸಂಸ್ಥೆಯ ಮಂಜುನಾಥ ಅಳವಣೆ, ಕೆ–ಎಸ್ ಎಂಎಫ್ ಖಜಾಂಚಿಯಾದ ಕಲ್ಲಪ್ಪ ಬೋರಣ್ಣವರ ಉಪಸ್ಥಿತರಿದ್ದರು.

## "ಜನ–ಸುರಕ್ಷಾ ಅಂದೋಲನ್" ಕಾರ್ಯಕ್ರಮ

ಬೈಲಹೊಂಗಲ: ತಾಲೂಕಿನ ಸಂಪಗಾವ ಗ್ರಾಪಂ. ನರೇಗಾ ಕಾಯಕ ಬಂಧುಗಳಿಗೆ ಕೆನರಾ ಬ್ಯಾಂಕಿನ ಅಮೂಲ್ಯ ಆರ್ಥಿಕ ಸಾಕ್ಷರತಾ ಕೇಂದ್ರ ವತಿಯಿಂದ "ಜನ–ಸುರಕ್ಷಾ ಅಂದೋಲನ್" ಕಾರ್ಯಕ್ರಮ ಮಂಗಳವಾರ ಹಮ್ಮಿಕೊಳ್ಳಲಾಗಿತ್ತು.

ಲೀಡ್ ಜಿಲ್ಲಾ ವ್ಯವಸ್ಥಾಪಕ ಪಿ.ಆರ್. ಕುಲಕರ್ಣಿ ಮಾತನಾಡಿ, ಕಾಯಕ ಬಂಧುಗಳು ಕೇಂದ್ರ ಸರಕಾರದ ಸಾಮಾಜಿಕ ಭದ್ರತಾ ಯೋಜನೆಗಳನ್ನು ಹೊಂದಿದ್ದು, ಎಲ್ಲ ಶ್ರೀಸಾಮಾನ್ಯ ಗ್ರಾಹಕರು ತಮ್ಮ ಪ್ರೀಮಿಯಂ ಮೊತ್ತವು ಇದೇ ಮೇ ತಿಂಗಳಲ್ಲಿ ಸ್ವಯಂ ಕಡಿತ (ಅಟೋ–ಡೆಬಿಟ್) ಆಗುವುದರಿಂದ ತಮ್ಮ–ತಮ್ಮ ಬ್ಯಾಂಕ್ ಖಾತೆಗಳಲ್ಲಿ ಕನಿಷ್ಠ 500 ರೂ. ಮೊತ್ತವನ್ನು ಕಾಯದಿರಿಸಿ,



ವಿಮೆಯನ್ನು ಪು:ನರುಜ್ಜೀವನಗೊಳಿಸಿ ಎಂಬ ಕಿವಿ ಮಾತನ್ನು ಹೇಳಿದರು.

ಜಿಲ್ಲಾ ವ್ಯವಸ್ಥಾಪಕ ಸಂಜಯ ವಾಂಜೇರಿ ಮಾತನಾಡಿ, ಅಟಲ್ ಪಿಂಚಣಿ ಯೋಜನೆ, ಸುಕನ್ಯ ಸಮೃದ್ಧಿ ಯೋಜನೆ ಹಾಗೂ ಸೈಬರ್ ಅಪರಾಧಗಳು ಮತ್ತು ಸೈಬರ್ ಸೆಕ್ಯೂರಿಟಿ ಬಗ್ಗೆ ಮಾತನಾಡಿ, ಗ್ರಾಹಕರು ಅನಾಮದೇಯ ಕರೆಗಳಿಂದ ಎಚ್ಚರಿಕೆಯಿಂದ ಇರಬೇಕು, ಒಂದು ವೇಳೆ ಹಣ ಕಳೆದುಕೊಂಡ ಸಂದರ್ಭದಲಿ ಸಹಾಯವಾಣಿ ಸಂಖ್ಯೆ 1930 ಗೆ ಕರೆ ಮಾಡಿ ದೂರುಸಲ್ಲಿಸಿ ಮರಳಿ ಹಣ ಪಡೆಯುವ ಸಾಧ್ಯತೆ ಇದೆ ಎಂದರು.

ಕೆನರಾ ಬ್ಯಾಂಕಿನ ಅಮುಲ್ಯ ಆರ್ಥಿಕ ಸಾಕ್ಷರತಾ ಕೇಂದ್ರದ ಸಮಾಲೋಚಕಿ ಗೀತಾ ಖಾನಪೇಠ ಮಾತನಾಡಿ ಕೇಂದ್ರ ಸರಕಾರದ ಸಾಮಾಜಿಕ ಭದ್ರತಾ ಯೋಜನೆಗಳ ಬಗ್ಗೆ ತಿಳಿಸಿದರು.

ಕೆನರಾ ಬ್ಯಾಂಕ ವ್ಯವಸ್ಥಾಪಕ ಪರಮಪ್ಪ ಕೊಟೂರ, ಸಹಾಯಕ ಪ್ರಬಂಧಕರಾದ ವಿಠ್ಠಲ ಬಟಕುರ್ಕಿ, ಗ್ರಾಮ ಕಾಯಕ ಮಿತ್ರ ಮಂಜುಳಾ ಅಮಾತಿ, ನರೇಗಾ ಮೇಟಗಳು, ಗ್ರಾ.ಪಂ ಸಿಬ್ಬಂದಿಗಳು ಹಾಗೂ ನರೇಗಾ ಕಾಯಕ ಬಂಧುಗಳು ಇದ್ದರು.

## ಡಾಕ್ಟರೇಟ್ ಪದವಿ ಪ್ರಧಾನ: ಅಭಿನಂದನಾ ಸಮಾರಂಭ



ಬೈಲಹೊಂಗಲ: ಧಾರ್ಮಿಕ ಕಾರ್ಯಗಳಿಂದ ಜನತೆ ನೆಮ್ಮದಿಯ ಜೀವನ ಕಂಡುಕೊಳ್ಳಲು ಸಾಧ್ಯವಿದೆ ಈ ನಿಟ್ಟಿನಲ್ಲಿ ನಾಡಿನಲ್ಲಿ ಧಾರ್ಮಿಕತೆಯನ್ನು ಬಿತ್ತುತ್ತಿರುವದನ್ನು ಪರಿಗಣಿಸಿ ಡಾ.ವೀರಯ್ಯ ಸ್ವಾಮಿಜಿ ಅವರಿಗೆ ಡಾಕ್ಟರೇಟ್ ಪದವಿ ನೀಡಿದ್ದು ಅವರ ಶ್ರೇಷ್ಠತೆಯನ್ನು ಎತ್ತಿ ತೋರಿಸುತ್ತದೆ ಉದ್ಯಮಿ ಸಿದ್ದನ್ನ ಮರಕುಂಬಿ ಹೇಳಿದರು.

ಅವರು ಮಂಗಳವಾರ ಪಟ್ಟಣದ ಹೊಸೂರ ರಸ್ತೆಯ ಭಗಳಾಂಬದೇವಿ ದೇವಸ್ಥಾನದ ಧರ್ಮದರ್ಶಿ ಡಾ.ವೀರಯ್ಯ ಸ್ವಾಮಿಜಿ ಅವರಿಗೆ ಡಾಕ್ಟರೇಟ್ ಪದವಿ ಪಡೆದ ಹಿನ್ನೆಲೆಯಲ್ಲಿ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ, ಶ್ರೀಗಳ ಧಾರ್ಮಿಕ ಕಾರ್ಯಕ್ಕೆ ಎಲ್ಲರೂ ಕೈಜೋಡಿಸಬೇಕು. ನಾಡಿನಲ್ಲಿ ಶಾಂತಿ ನೆಲೆಸಲು ಶ್ರಮಿಸಬೇಕು.

ಶಿವಾನಂದ ಮಠಪತಿ, ಜಿ.ಬಿ.ಗಿರಿಜನ್ನವರ, ಮಹಾಂತೇಶ ಮುರಗೋಡ ಮಾತನಾಡಿ, ಶ್ರೀಗಳಿಗೆ ಧಾರ್ಮಿಕ ಕಾರ್ಯ ಪರಿಗಣಿಸಿ ಡಾಕ್ಟರೇಟ್ ಪ್ರಶಸ್ತಿ ನೀಡಿದ್ದು ನಾಡಿಗೆ ಸಿಕ್ಕ ಗೌರವವಾಗಿದೆ ಎಂದರು.

ಮಾಜಿ ಪುರಸಭೆ ಅಧ್ಯಕ್ಷ ಎಂ.ಜಿ.ಪಾಟೀಲ ಅಧ್ಯಕ್ಷತೆ ವಹಿಸಿದ್ದರು.

ಅನೇಕ ಗಣ್ಯಮಾನ್ಯರು ಡಾ.ವೀರಯ್ಯ ಸ್ವಾಮೀಜಿ ಅವರನ್ನು ಸನ್ಮಾನಿಸಿದರು.

## ಖಾಲಿ ಇರುವ ಪದವೀಧರ ಪ್ರಾಥಮಿಕ ಶಿಕ್ಷಕರ (6–8) ವೃಂದದ ನೇಮಕಾತಿ

ಬೆಳಗಾವಿ: ಬೆಳಗಾವಿ ಶೈಕ್ಷಣಿಕ ಜಿಲ್ಲೆಯಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಪದವೀಧರ ಪ್ರಾಥಮಿಕ ಶಿಕ್ಷಕ (6–8) ವೃಂದದ ನೇಮಕಾತಿಗಾಗಿ ಮಾರ್ಚ.08 2023 ರಂದು 1:1 ರಂತೆ ಅಂತಿಮ ಆಯ್ಕೆ ಪಟ್ಟಿಯನ್ನು ಮಾನ್ಯ ವಿಶೇಷಾಧಿಕಾರಿಗಳು ಕೇಂದ್ರೀಕೃತ ದಾಖಲಾತಿ ಘಟಕ ಬೆಂಗಳೂರು ರವರು ಪ್ರಕಟಿಸಿರುತ್ತಾರೆ.

GPSTR–2022 ನೇ ಸಾಲಿನ 1:1 ರ ಅಂತಿಮ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಸ್ವೀಕರಿಸುವ ಮತ್ತು ನೈಜತೆ ಪರಿಶೀಲನೆ ಮಾಡಿಸಲು ಸಿದ್ದತೆಗಳನ್ನು ಮಾಡಿಕೊಳ್ಳುವಂತೆ ಬೆಂಗಳೂರು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ಆದೇಶಿಸಿರುತ್ತಾರೆ.

ಈ ಸಂಬಂಧವಾಗಿ 1:1 ಅಂತಿಮ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳು ಈ ಕೆಳಗೆ ನಮೂದಿಸಿರುವ ನಿಗಧಿತ ದಿನಾಂಕಗಳಂದು ನಿಗಧಿಪಡಿಸಿರುವ ವಿಷಯವಾರು ಅಭ್ಯರ್ಥಿಗಳು ತಮ್ಮ ಮೂಲ ದಾಖಲೆಗಳನ್ನು ಹಾಗೂ ಒಂದು ಪ್ರತಿ ದೃಢೀಕೃತ ಝೇರಾಕ್ಸ್ ಪ್ರತಿಗಳು ಮತ್ತು (6 ಪಾಸ್‌ಪೋರ್ಟ ಅಳತೆಯ) ಭಾವಚಿತ್ರಗಳನ್ನು ಉಪನಿರ್ದೇಶಕರು(ಆಡಳಿತ) ಕಛೇರಿಯಲ್ಲಿ ಸಲ್ಲಿಸುವಂತೆ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಮೂಲ ದಾಖಲೆಗಳ ಸ್ವೀಕೃತಿ ವೇಳಾ ಪಟ್ಟಿ:**

ಮೇ.22 2023 ರಂದು ಇಂಗ್ಲೀಷ ವಿಷಯ ಹಾಜರಾಗಬೇಕಾದ ಅಭ್ಯರ್ಥಿಗಳ ಸಂಖ್ಯೆ 01 ರಿಂದ 128

ಮೇ.23 2023 ಗಣಿತ ಮತ್ತು ವಿಜ್ಞಾನ (ಕನ್ನಡ) ವಿಷಯ ಹಾಜರಾಗಬೇಕಾದ ಅಭ್ಯರ್ಥಿಗಳ ಸಂಖ್ಯೆ 01 ರಿಂದ 143

ಮೇ.24 2023 ಗಣಿತ ಮತ್ತು ವಿಜ್ಞಾನ (ಮರಾಠಿ) ಹಾಜರಾಗಬೇಕಾದ ಅಭ್ಯರ್ಥಿಗಳ ಸಂಖ್ಯೆ 01 ರಿಂದ 12, ಗಣಿತ ಮತ್ತು ವಿಜ್ಞಾನ (ಉರ್ದು) 01 ರಿಂದ 06, ಸಮಾಜ ವಿಜ್ಞಾನ(ಕನ್ನಡ) 01 ರಿಂದ 100

ಮೇ.25 2023 ಸಮಾಜ ವಿಜ್ಞಾನ(ಕನ್ನಡ) 101 ರಿಂದ 225

ಮೇ.26 2023ಸಮಾಜ ವಿಜ್ಞಾನ(ಕನ್ನಡ) 226 ರಿಂದ 251

ಮೇ.29 2023 ಸಮಾಜ ವಿಜ್ಞಾನ(ಮರಾಠಿ) 01 ರಿಂದ 33, ಸಮಾಜ ವಿಜ್ಞಾನ(ಉರ್ದು) 01 ರಿಂದ 07, ಜೀವ ವಿಜ್ಞಾನ(ಕನ್ನಡ) 01 ರಿಂದ 26, ಜೀವ ವಿಜ್ಞಾನ(ಮರಾಠಿ) 01 ರಿಂದ 03, ಜೀವ ವಿಜ್ಞಾನ(ಉರ್ದು) 01 ರಿಂದ 06 ಇರುತ್ತದೆ.

## ಹೈನುಗಾರಿಕೆ ಮತ್ತು ಎರೆಹುಳು ಗೊಬ್ಬರ ತಯಾರಿಕೆ ತರಬೇತಿ

ಬೆಳಗಾವಿ: ಬೆಳಗಾವಿ ಜಿಲ್ಲೆಯ ಗ್ರಾಮೀಣ ಪ್ರದೇಶದ ಯುವಕರಿಗೆ, ನಿರುದ್ಯೋಗಿಗಳಿಗೆ, ಮತ್ತು ಮಹಿಳಾ ನಿರುದ್ಯೋಗಿಗಳಿಗೆ ಹೈನುಗಾರಿಕೆ ಮತ್ತು ಎರೆಹುಳು ಗೊಬ್ಬರ ತಯಾರಿಕೆ ತರಬೇತಿ 22.ಮೇ 2023 ರಿಂದ ಹಮ್ಮಿಕೊಳ್ಳಲಾಗಿದೆ.

ತರಬೇತದಾರರಿಗೆ ಇರಬೇಕಾದ ಅರ್ಹತೆಗಳು:– 18 ರಿಂದ 45 ವಯಸ್ಸಿನವರಾಗಿರಬೇಕು, ಗ್ರಾಮೀಣ ಪ್ರದೇಶದವರಾಗಿರಬೇಕು, BPL/ಜಾಬ್ ಕಾರ್ಡ ಹೊಂದಿರಬೇಕು.

ನೀಡಬೇಕಾದ ದಾಖಲೆಗಳು:– BPL/ ಜಾಬ್ ಕಾರ್ಡ, ಆಧಾರ ಕಾರ್ಡ, ಬ್ಯಾಂಕ ಪಾಸ್ ಬುಕ್ಕ, 3 ಭಾವಚಿತ್ರಗಳು. ತರಬೇತಿಯು ಊಟ ಮತ್ತು ವಸತಿಯೊಂದಿಗೆ ಸಂಪೂರ್ಣ ಉಚಿತವಾಗಿರುತ್ತದೆ.

ಆರ್ಜಿ ಸ್ವೀಕರಿಸುವ ಕೊನೆಯ ದಿನಾಂಕ ಮೇ.20 2023. ಆರ್ಜಿಯನ್ನು ಸಂಸ್ಥೆಯ ಆರ್ಜಿ ನಮೂನೆಯಲ್ಲಿ ಅಥವಾ ಬಿಳಿಹಾಳಿಯಲ್ಲಿ ನೇರವಾಗಿ ಕಾರ್ಯಾಲಯಕ್ಕೆ, ಪೋಸ್ಟ್ ಮುಖಾಂತರ ಅಥವಾ ಇಮೇಲ್‌ಗೆ ಕಳುಹಿಸಬಹುದು.

ಸಂಸ್ಥೆಯ ವಿಳಾಸ:– ಕೆನರಾ ಬ್ಯಾಂಕ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ (ಸಿಬಿ ಆರ್‌ಸೆಟಿ), ಪ್ಲಾಟ ನಂ. ಸಿ ಎ –03 (ಪಾರ್ಟ) ಕಣಬರ್ಗಿ ಇಂಡಸ್ಟ್ರಿಯಲ್ ಎರಿಯಾ, ಆಟೋ ನಗರ. ಬೆಳಗಾವಿ – 590015.

ದೂರವಾಣಿ ಸಂಪರ್ಕ ಸಂಖ್ಯೆ:– 0831–2440644, 8296792166, 9845750043, 8050406866, 8867388906, 9449860564 Email: cbrsetibelagavi@gmail.com ಬೆಳ್ಳಿಗ್ಗೆ 9.30 ರಿಂದ, ಸಂಜೆ 6 ವರೆಗೆ ಸಂಪರ್ಕಿಸಬಹುದು ಎಂದು ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬೆಳಗಾವಿ ಜಿಲ್ಲೆಯಲ್ಲಿ ಠೇವಣಿ ಕಳೆದುಕೊಂಡ 139 ಅಭ್ಯರ್ಥಿಗಳು

ಬೆಳಗಾವಿ: ಜಿಲ್ಲೆಯಲ್ಲಿ ವಿಧಾನಸಭಾ ಚುನಾವಣೆ ಯಲ್ಲಿ ಕಣಕ್ಕಿಳಿದಿದ್ದ 187 ಅಭ್ಯರ್ಥಿಗಳ ಪೈಕಿ ಕೇವಲ 48 ಅಭ್ಯರ್ಥಿಗಳು ಮಾತ್ರ ತಮ್ಮ ಠೇವಣಿ ಉಳಿಸಿಕೊಳ್ಳಲು ಸಾಧ್ಯವಾಗಿದೆ. ಉಳಿದ 139 ಮಂದಿ ಠೇವಣಿ ಕಳೆದುಕೊಂಡಿದ್ದಾರೆ.ಜಿಲ್ಲೆಯಲ್ಲಿ ಇದೇ ಮೊದಲ ಬಾರಿಗೆ ಇಷ್ಟು ದೊಡ್ಡ ಸಂಖ್ಯೆಯ ಅಭ್ಯರ್ಥಿಗಳು ಠೇವಣಿ ಕಳೆದುಕೊಂಡಿದ್ದಾರೆ.

**ಯಾರು, ಎಲ್ಲಿ ಕಳೆದುಕೊಂಡರು:**

**ನಿಪ್ಪಾಣಿ** ಕ್ಷೇತ್ರದಲ್ಲಿ ಶಶಿಕಲಾ ಜೊಲ್ಲೆ (ಬಿಜೆಪಿ), ಕಾಕಾಸಾಹೇಬ ಪಿ. ಪಾಟೀಲ (ಕಾಂಗ್ರೆಸ್), ರಾಜು ಪವಾರ (ಜನತಾ ದಳ) ಹೆಚ್ಚಿನ ಮತಗಳನ್ನು ಹಂಚಿಕೊಂಡಿದ್ದಾರೆ. ಹೀಗಾಗಿ, ರಾಜೇಶ ಬನವಣ್ಣಾ (ಆಮ್ ಆದ್ಮಿ ಪಕ್ಷ), ಉತ್ತಮ ರಾವಸಾಹೇಬ ಪಾಟೀಲ (ರಾಷ್ಟ್ರೀಯ ಕಾಂಗ್ರೆಸ್ ಪಕ್ಷ), ಶಕುಂತಲಾ ಅಶೋಕ ತೇಲಿ (ಕಲ್ಯಾಣ ರಾಜ್ಯ ಪ್ರಗತಿ ಪಕ್ಷ), ಜಯರಾಮ ಮಿರಜಕರ (ಪಕ್ಷೇತರ), ಜಿತೇಂದ್ರ ಸುಭಾಷ ನೇರ್ಲಿ (ಪಕ್ಷೇತರ), ರಘುನಾಥ ಮಲಕರಿ ಅರಗೆ (ಪಕ್ಷೇತರ) ಸಂಭಾಜಿದಾದಾ ಥೋರಾವತ (ಪಕ್ಷೇತರ) ಠೇವಣಿ ಕಳೆದುಕೊಂಡಿದ್ದಾರೆ.

**ಚಿಕ್ಕೋಡಿ ಸದಲಗಾ:** ಶ್ರೀಕಾಂತ ಮುದಗೌಡ ಪಾಟೀಲ (ಆಮ್ ಆದ್ಮಿ ಪಾರ್ಟಿ), ಅಪ್ಪಾಸಾಹೇಬ ಶ್ರೀಪತಿ ಕುರಾಣಿ (ಇಂಡಿಂ–ಯನ್ ಮೂಮೆಂಟ್ ಪಾರ್ಟಿ). ಈಶ್ವರ ಮಾರುತಿ ಗುಡಾರ (ಬಹುಜನ ಭಾರತ ಪಾರ್ಟಿ), ಮಂಜುನಾಥ ಬಾಲು ಪರಗೌಡ (ಪಕ್ಷೇತರ), ಡಾ. ಮಿಲನ ವಿಠಲ್ ಕಾಂಬಳೆ (ಪಕ್ಷೇತರ), ಮೋಹನ ಗುರಪ್ಪ ಮೋಟಣ್ಣವರ (ಪಕ್ಷೇತರ), ಕುಮಾರ ಡೋಂಗ್ರೆ(ರಾಷ್ಟ್ರ ಸಮಿತಿ).

**ಅಥಣಿ:** ಸಂಪತಕುಮಾರ ಶೆಟ್ಟಿ (ಆಮ್ ಆದ್ಮಿ ಪಕ್ಷ), ಬಸವರಾಜ ಭೀಮಪ್ಪ ಬಿಸನಕೊಪ್ಪ (ಕಲ್ಯಾಣ ರಾಜ್ಯ ಪ್ರಗತಿ ಪಕ್ಷ), ಭರತೇಶ ಬುಜಬಲಿ ಕುದರಿ (ಉತ್ತಮ ಪ್ರಜಾಕೀಯ ಪಕ್ಷ), ಸಾಗರ ಕುಂಬಾರ (ಕರ್ನಾಟಕ ರಾಷ್ಟ್ರ ಸಮಿತಿ), ಸಂಜೀವ ಹರಿಶ್ಚಂದ್ರ ಕಾಂಬಳೆ (ಪಕ್ಷೇತರ), ಜ್ಯೋತಿಬಾ ಬಾವುಸಾಬ ಜಾಧವ(ಪಕ್ಷೇತರ), ಪೈಗಂಬರ ಗುಡುಸಾ ಕೊಟ್ಟಲಗಿ (ಪಕ್ಷೇತರ), ರವಿ ಶಿವಪ್ಪ ಪಡಸಲಗಿ (ಪಕ್ಷೇತರ), ಡವರಿ ರಾಜು (ಪಕ್ಷೇತರ).

**ಕಾಗವಾಡ:** ರಜಾಕ್ ಮುಲ್ಲಾ (ಆಮ್ ಆದ್ಮಿ ಪಕ್ಷ), ಸಂಜಯ ಕಾಂಬಳೆ (ಬಿಎಸ್ಪಿ), ಸತೀಶ ಸನದಿ(ರಾಷ್ಟ್ರೀಯ ಸಮಾಜ ಪಕ್ಷ), ಹನಮಂತಗೌಡ ಪಾಟೀಲ (ಪ್ರಜಾಕೀಯ), ವಿನೋಜ ನಂಗಾರೆ (ಕರ್ನಾಟಕ ರಾಷ್ಟ್ರ ಸಮಿತಿ), ಚಿದಾನಂದ ಚೌಹಾಣ್ (ಪಕ್ಷೇತರ), ಸತ್ಯಪ್ಪ ಕಾಲೇಳಿ (ಪಕ್ಷೇತರ), ಸದಾನಂದ್ ಮಗದುಮ್ (ಪಕ್ಷೇತರ).

**ಕುಡಚಿ:** ಸಿ.ಎಂ. ಕೃಷ್ಣಾ (ಡಾ. ಅಂಬೇಡ್ಕರ್ ಪೀಪಲ್ಸ್ ಪಾರ್ಟಿ), ಯಲ್ಲಪ್ಪ ಶಿಂಗೆ(ಪಕ್ಷೇತರ), ಕಾದ್ರೋಳಿ ಚಂದ್ರಕಾಂತ (ಬಿಎಸ್ಪಿ), ಶ್ರೀಶೈಲ ಭಜಂತ್ರಿ (ಕಲ್ಯಾಣ ರಾಜ್ಯ ಪ್ರಗತಿ ಪಕ್ಷ).

**ರಾಯಬಾಗ:** ಬಸವರಾಜ ನಸಲಾಪುರೆ (ಭಾರತೀಯ ರಾಷ್ಟ್ರವಾದಿ ಪಕ್ಷ), ಶಂಕರ ಖಾತೇದಾರ (ಆಪ್), ಅಶೋಕ ದಂಡಿನವರ (ಪಕ್ಷೇತರ), ಶಂಭು ಕಲ್ಲೋಳಕರ (ಪಕ್ಷೇತರ), ಯಮನಪ್ಪ ಕುದರಿ (ಪಕ್ಷೇತರ), ಬಸವಣ್ಣಿ ದೊಡ್ಡಲಿಂಗ (ಪಕ್ಷೇತರ), ಭೀಮಸೇನ ಸನದಿ (ಪಕ್ಷೇತರ).

**ಹುಕ್ಕೇರಿ:** ಬಸವರಾಜ ಪಾಟೀಲ (ಜನತಾ ದಳ (ಜಾತ್ಯತೀತ), ಬಸವರಾಜ ಕಾಂಬಳೆ (ಬಿಎಸ್ಪಿ), ಘಟಿಗೆಪ್ಪ ಮಗದುಮ್ (ಬಹುಜವ ಭಾರತ ಪಾರ್ಟಿ), ಮಂಜುನಾಥ ಗಡ್ಡೆನ್ನವರ (ಆಪ್), ಪುಂಡಲೀಕ ಕುಲ್ಲೂರ




(ಪಕ್ಷೇತರ).

**ಯಮಕನಮರಡಿ:** ಮಾರುತಿ ತಿಪ್ಪಣ್ಣ ನಾಯ್ಕ (ಪಕ್ಷೇತರ), ಶಿವಾನಂದ ಸನ್ನಕ್ಕನವರ (ಪಕ್ಷೇತರ).

**ಅರಭಾವಿ:** ಸುಧಾ ಹಿರೇಮಠ (ಪಕ್ಷೇತರ), ಬಸವಂತ ವಡೇರ (ಬಿಎಸ್ಪಿ), ಸಿದ್ಧಪ್ಪ ಹೊಸೂರ (ಪಕ್ಷೇತರ), ಶಿವಾನಂದ ದೇಸಾಯಿ (ಕರ್ನಾಟಕ ರಾಷ್ಟ್ರ ಸಮಿತಿ), ಗುರುಪುತ್ರ ಕುಲ್ಲೂರ (ಪಕ್ಷೇತರ), ಬಸಪ್ಪ ನಾಗನೂರ (ಪಕ್ಷೇತರ), ಭಿಮಪ್ಪ ಗಡಾದ (ಪಕ್ಷೇತರ), ಫೂಳಪ್ಪ ಮೇಟಿ (ಸ್ವಯಂ ಕೃಷಿ ಪಾರ್ಟಿ), ಇಜಾಜ ಅಹ್ಮದ ಕೊಟ್ಟಲಗಿ (ಆಪ್), ಅಶೋಕ ಹಂಜಿ (ಪಕ್ಷೇತರ)

**ರಾಮದುರ್ಗ:** ಮಲಿಕ್ಜಾನ್ ಹು ನದಾಫ್ (ಎಎಪಿ), ಸುನಂದಾ ನಿಂಗಪ್ಪ ಹಡಪದ (ಬಿಎಸ್ಪಿ), ಬಸಪ್ಪ ಗುರುಸಿದ್ದಪ್ಪ ಕುಂಬಾರ (ಕೆಆರ್‌ಎಸ್), ಈಶ್ವರ ಚಿಕ್ಕನರಗುಂದ (ಪಕ್ಷೇತರ), ಈಶ್ವರಗೌಡ ಶಿವಶಂಕರಗೌಡ ಪಾಟೀಲ (ಪಕ್ಷೇತರ), ಗಿರೀಶ ಭೀಮಪ್ಪ ಮುನವಳ್ಳಿ (ಪಕ್ಷೇತರ), ಗುರುಸಿದ್ದಪ್ಪ ಬಸಲಿಂಗಪ್ಪ ತೊಗ್ಗಿ (ಪಕ್ಷೇತರ), ದಾದಾಫೀರ್ ಫಕೀರಸಾಬ್ ಬಿಕಾಜಿ (ಪಕ್ಷೇತರ), ಮಧುರ ಸುಧೀರ ಸಿದ್ದನಕೊಳ್ಳ (ಪಕ್ಷೇತರ), ಶಿವಪ್ಪ ಬಸಪ್ಪ ಬಕಾಡಿ (ಪಕ್ಷೇತರ).

**ಬೆಳಗಾವಿ ಗ್ರಾಮೀಣ:** ಯಮನಮ್ಮ ಗಂಗಪ್ಪ ತಳವಾರ (ಬಿಎಸ್ಪಿ), ಗಣೇಶ ಪ್ರಕಾಶ ಸಿಂಗನ್ನವರ (ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯ), ಬಸವರಾಜ ಕಲ್ಲಪ್ಪ ಕುಡ್ಡೆಮ್ಮಿ(ಪಕ್ಷೇತರ), ಟಿ.ಮಾಲತಿ (ಆಮ್ ಆದ್ಮಿ ಪಕ್ಷ), ರವಿಕುಮಾರ ಡೇವಿಡ್ ಪಂಡಿತಿ (ಪಕ್ಷೇತರ), ರಾಜು ಚೌಗುಲಾ (ಪಕ್ಷೇತರ).

ಗೋಕಾಕ: ಸ ುರೇಶ ಪಟ್ಟಣಶೆಟ್ಟಿ (ಪ್ರಜಾಕೀಯ), ಹನುಮಂತ ನಾಗನೂರ (ಸ್ವಯಂ ಕೃಷಿ ಪಾರ್ಟಿ), ಜಿ.ಎಂ. ಕರೆಪ್ಪಗೋಳ (ಆಪ್), ಬಿ. ಲೋಹಿತ್ (ಬಹುಜನ ಸಮಾಜ ಪಾರ್ಟಿ), ಸುರೇಶ ಮರಲಿಂಗಣ್ಣವರ (ಪಕ್ಷೇತರ), ಜಗದೀಶ ಸಿ.ಕೆ.(ಸೋಸಿಯಲಿಸ್ಟ ಪಾರ್ಟಿ), ಪುಂಡಲೀಕ ಕಲ್ಲೂರ (ಪಕ್ಷೇತರ), ಭೀಮಶಿ ನಾಯ್ಕ (ಪಕ್ಷೇತರ).

**ಬೆಳಗಾವಿ ಉತ್ತರ:** ರಾಜಕುಮಾರ ಟೋಪಣ್ಣವರ (ಆಪ್), ಪ್ರವೀಣ ಹಿರೇಮಠ (ಕೆಆರ್ಪಿ), ಕಾಶಿರಾಮ ಬಿಶನ ಚವ್ಹಾಣ (ಪಕ್ಷೇತರ), ಶ್ರೀನಿವಾಸ ತಳವಾರ (ಪಕ್ಷೇತರ), ಅಮರ ಯಳ್ಳೂರಕರ (ಪಕ್ಷೇತರ), ಅಶೋಕ ಗೋವೆಕರ (ಪಕ್ಷೇತರ), ವಿಶಾಲ ಗಾಯಕಡಾಡ (ಪಕ್ಷೇತರ), ನಾಗೇಶ ವಿವಾಟೆ (ಪಕ್ಷೇತರ), ದಿಲ್ಶಾದ ತಹಸೀಲ್ದಾರ (ಆರ್ಪಿಐ), ಇಸ್ಮಾಯಿಬ ಮಗದುಮ್ (ಪಕ್ಷೇತರ), ಬಸವರಾಜ ಜರಲಿ (ಕೆಆರ್–ಎಸ್), ಮಲ್ಲಪ್ಪ ಚೌಗುಲಾ (ಯುಪಿಪಿ).

**ಬೆಳಗಾವಿ ದಕ್ಷಿಣ:** ನೂರಹ್ಮದ ಮುಲ್ಲಾ (ಆಪ್), ರಮಾಕಾಂತ ಕೊಂಡುಸ್ಕರ (ಪಕ್ಷೇತರ), ಕೆಂಪ ಸಂತೋಷ (ಪಕ್ಷೇತರ), ಹನಮಂತ ಮಡಿವಾಳರ (ಪಕ್ಷೇತರ), ಭರತ ಗೋಟಿ (ಪಕ್ಷೇತರ).

**ಖಾನಾಪುರ:** ರಮೇಶ ಭೀಮಪ್ಪ ಮನ್ನೊದ್ದಾರ (ರಾಷ್ಟ್ರ ಸಮಿತಿ), ಕೃಷ್ಣಾಜೀ ಪುಂಡಲೀಕ ಪಾಟೀಲ (ಶಿವಸೇನೆ), ಆಜು ಪೂಜಾರಿ (ಕಲ್ಯಾಣ ರಾಜ್ಯ ಪ್ರಗತಿ ಪಕ್ಷ), ಮುರಳೀಧರ ಗಣಪತಿ ಪಾಟೀಲ (ಪಕ್ಷೇತರ), ಸುರೇಶ ಲಕ್ಷ್ಮಣ ಪಾಟೀಲ (ಪಕ್ಷೇತರ), ಯಲ್ಲಪ್ಪ ಫಕೀರಪ ಕೋಲಕಾರ (ಪಕ್ಷೇತರ), ಇರ್ಫಾನ್ ತಾಳಿಕೋಟಿ (ಪಕ್ಷೇತರ), ಲಕ್ಷ್ಮಣ ಯಲ್ಲಪ್ಪ ಬನ್ನೂರ (ಪಕ್ಷೇತರ), ಸೀತಾರಾಮ ಸುತಾರ (ಪಕ್ಷೇತರ), ಆರ್ಬಿ. ಪಾಟೀಲ (ಪಕ್ಷೇತರ).

**ಚನ್ನಮ್ಮನ ಕಿತ್ತೂರು:** ಚೇತನ ಆರ್. ದೇವಮಟ್ಟಿ (ಮಕ್ಕಳ ಪಕ್ಷ), ಪ್ರವೀಣ ಮಹಾಬಲೇಶ್ವರ ದೇಗಲೋಳಿ (ಉತ್ತಮ ಪ್ರಜಾಕೀಯ ಪಕ್ಷ), ಬಸಪ್ಪ (ಬಸವರಾಜ) ಕೆಳಗಡೆ (ಪಕ್ಷೇತರ), ಆನಂದ ಹಂಪಣ್ಣವರ (ಆಮ್ ಆದ್ಮಿ ಪಕ್ಷ), ಮಹೇಶ ಫಕೀರಪ್ಪ ಹೊಸಮನಿ (ರಾಷ್ಟ್ರ ಸಮಿತಿ), ಬೂದಯ್ಯ ಪೂಜೇರಿ (ಕರುನಾಡು ಪಕ್ಷ).

**ಬೈಲಹೊಂಗಲ:** ಪ್ರಶಾಂತ ಜಕ್ಕಪ್ಪನವರ (ಕಲ್ಯಾಣ ರಾಜ್ಯ ಪ್ರಗತಿ ಪಕ್ಷ), ದಯಾನಂದ ಚಿಕ್ಕಮಠ (ಇಂಡಿಯನ ಮೂಮೆಂಟ್ ಪಾರ್ಟಿ), ವಿಶ್ವನಾಥ ಪಾಟೀಲ (ಪಕ್ಷೇತರ), ರುದ್ರಪ್ಪ ಮಾಳಗಿ (ಪ್ರಜಾಕೀಯ), ಬಸನಗೌಡ ಚಿಕ್ಕನಗೌಡರ (ಆಮ್ ಆದ್ಮಿ ಪಾರ್ಟಿ), ಇರ್ಫಾನ್ ಬಾಗೇವಾಡಿ (ಕರ್ನಾಟಕ ರಾಷ್ಟ್ರ ಸಮಿತಿ).

**ಸವದತ್ತಿ ಯಲ್ಲಮ್ಮ:** ಬಾಪುಗೌಡ ಸಿದ್ದನಗೌಡ ಪಾಟೀಲ (ಆಮ್ ಆದ್ಮಿ ಪಾರ್ಟಿ), ಮಲ್ಲಿಕಾರ್ಜುನ ಚನ್ನಪ್ಪ ಮೇಲಗಿರಿ (ಮಕ್ಕಳ ಪಕ್ಷ), ಸದಾನಂದ ಉಪ್ಪಾರ (ಪಕ್ಷೇತರ), ಆನಂದ ಐರಯ್ಯ ಕಂತಿಮಠ (ಪಕ್ಷೇತರ), ಅಂತಕ್ಕನವರ ಪರಪ್ಪ (ರಾಷ್ಟ್ರ ಸಮಿತಿ), ಮಲ್ಲಿಕಾರ್ಜುನ ಗಂಗಪ್ಪ ಮುದೇನೂರು (ಪಕ್ಷೇತರ).

**ಠೇವಣಿ ಕಳೆದುಕೊಂಡ ಜೆಡಿಎಸ್ ಅಭ್ಯರ್ಥಿಗಳು**

ಜಿಲ್ಲೆಯ ಒಂದೂ ಕ್ಷೇತ್ರದಲ್ಲಿ ಜೆಡಿಎಸ್ ಖಾತೆ ತೆರೆದಿಲ್ಲ. ಬದಲಾಗಿ ಬಹುಪಾಲು ಕಡೆ ಠೇವಣಿ ಕೂಡ ಕಳೆದುಕೊಂಡಿದೆ. ಸವದತ್ತಿ ಯಲ್ಲಮ್ಮ, ಖಾನಾಪುರ, ಯಮಕಮರಡಿ, ಬೈಲಹೊಂಗಲ ಕ್ಷೇತ್ರಗಳಲ್ಲಿ ಮಾತ್ರ ಅಭ್ಯರ್ಥಿಗಳು ಠೇವಣಿ ಉಳಿಸಿಕೊಂಡಿದ್ದಾರೆ.

ಬೆಳಗಾವಿ ಉತ್ತರ ಕ್ಷೇತ್ರದಲ್ಲಿ ಶಿವಾನಂದ ಮುಗಳಿಹಾಳ, ಅಥಣಿ ಶಶಿಕಾಂತ ಪಡಸಲ, ಕಾಗವಾಡದ ಮಲ್ಲಿಕಾರ್ಜುನ ಗುಂಜಿಗಾಂವಿ, ಕುಡಚಿಯಲ್ಲಿ ಆನಂದ ಮಾಳಗಿ, ರಾಮದುರ್ಗದಲ್ಲಿ ಪ್ರಕಾಶ್ ಮುಧೋಳ ಬೆಳಗಾವಿ ಗ್ರಾಮೀಣ ಕ್ಷೇತ್ರದಲ್ಲಿ ಶಂಕರಗೌಡ ಪಾಟೀಲ, ಹುಕ್ಕೇರಿಯಲ್ಲ ಬಸವರಾಜ ಮಲಗೌಡ ಪಾಟೀಲ, ಕಿತ್ತೂರಲ್ಲಿ ಅಶ್ವಿನಿ ಸಂಗಯ್ಯ ಪೂಜೇರ, ಬೆಳಗಾವಿ ದಕ್ಷಿಣದಲ್ಲಿ ಶ್ರೀನಿವಾಸ ತಾಳೂಕರ, ಸದಲಗಾದಲ್ಲಿ ಸುಹಾಸ ವಾಕ್ಕೆ, ಅರಭಾವಿಯಲ್ಲಿ ಪ್ರಕಾಶ ಕಲಶೆಟ್ಟಿ ಠೇವಣಿ ಕಳೆದುಕೊಂಡಿದ್ದಾರೆ.

**ಲೆಕ್ಕ ಹಾಕುವುದು ಹೇಗೆ?**

ಕ್ಷೇತ್ರದಲ್ಲಿ ಮಾನ್ಯವಾದ ಒಟ್ಟು ಮತಗಳಲ್ಲಿ ಆರನೇ ಒಂದು ಭಾಗ (ಶೇ 16.66) ಮತಗಳನ್ನು ಪಡೆದ ಅಭ್ಯರ್ಥಿಯ ಠೇವಣಿ ಉಳಿಯುತ್ತದೆ. ಸಾಮಾನ್ಯ ಕ್ಷೇತ್ರದಲ್ಲಿ ಅಭ್ಯರ್ಥಿಗೆ ?10 ಸಾವಿರ ಠೇವಣಿ ಇದ್ದರೆ, ಮೀಸಲು ಕ್ಷೇತ್ರದಲ್ಲಿ ರೂ 5 ಸಾವಿರ ಠೇವಣಿ ಕಟ್ಟಬೇಕಿತ್ತು. ಈ ರೀತಿ ಕಟ್ಟಿದ ಠೇವಣಿ ಹಣವು ಶೇ 16.66ರಷ್ಟು ಮತ ತೆಗೆದುಕೊಂಡವರಿಗೆ ಮಾತ್ರ ಮರಳುತ್ತದೆ. ಇಲ್ಲದಿದ್ದರೆ ಚುನಾವಣಾ ಆಯೋಗಕ್ಕೆ ಜಮೆಯಾಗುತ್ತದೆ.

ಅನಗತ್ಯವಾಗಿ ನಾಮಪತ್ರ ಸಲ್ಲಿಸುವುದು, ಸ್ಪರ್ಧೆಯಲ್ಲಿ ಗೊಂದಲ ಮೂಡಿಸುವುದನ್ನು ನಿಯಂತ್ರಿಸಲು ಠೇವಣಿ ಪದ್ಧತಿ ಜಾರಿ ಇದೆ. ಈ ಬಾರಿ ಕಾಂಗ್ರೆಸ್, ಬಿಜೆಪಿ, ಜೆಡಿ–ಎಸ್, ಎಂಇಎಸ್ ಅಭ್ಯರ್ಥಿಗಳನ್ನು ಹೊರತುಪಡಿಸಿದರೆ ಬಹುಪಾಲು ಪಕ್ಷೇತರರು, ಕೆಆರ್ಪಿಪಿ, ಎಎಪಿ, ಕೆಆರ್‌ಎಸ್, ಕೆಜೆಪಿ, ಉತ್ತಮ ಪ್ರಜಾಕೀಯ ಸೇರಿದಂತೆ ಯಾವುದೇ ಪಕ್ಷದ ಅಭ್ಯರ್ಥಿಗಳು ಠೇವಣಿ ಉಳಿಸಿಕೊಂಡಿಲ್ಲ.

# ಬಿಜೆಪಿ ದ್ರೋಹ ಮಾಡಿದೆ: ಎಸ್.ಐ.ಚಿಕ್ಕನಗೌಡರ ಆರೋಪ

ಧಾರವಾಡ : ಕಳೆದ ಮೂವತ್ತೊಂದು ವರ್ಷಗಳಿಂದ ನಾನು ಭಾರತೀಯ ಜನತಾ ಪಕ್ಷ ಕಟ್ಟಿ ಬೆಳೆಸಿದ್ದೇನೆ.



ಪಕ್ಷದ ನಾಯಕರು ನನಗೆ ದ್ರೋಹ ಮಾಡಿದ್ದಾರೆ ಎಂದು ಮಾಜಿ ಶಾಸಕ ಎಸ್.ಐ.ಚಿಕ್ಕನಗೌಡರ ಪುನಃ ಬಿಜೆಪಿ ಮೇಲೆ ಕಿಡಿ ಕಾರಿದ್ದಾರೆ.

ಧಾರವಾಡ ಜಿಲ್ಲೆಯ ಅದರಗುಂಚಿ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹಾಗೂ ಬಿ.ಎಲ್.ಸಂತೋಷ ಕರ್ನಾಟಕ ರಾಜ್ಯಕ್ಕೆ ನಾನೇ ಪ್ರಧಾನ ಮಂತ್ರಿ ನಾನೇ ಮುಖ್ಯಮಂತ್ರಿ ಎನ್ನುವ ರೀತಿ ವರ್ತನೆ ತೋರಿದ್ದಾರೆ.

ಈ ಮೂಲಕ ನನಗೆ ಅನ್ಯಾಯ, ದ್ರೋಹ, ಮೋಸ ಮಾಡಿದ್ದಾರೆ. ಈ ಮೂರು ಕಾರಣದಿಂದ ನಾನು ಪಕ್ಷೇತರ ಅಭ್ಯರ್ಥಿಯಾಗಿ ಚುನಾವಣೆಗೆ ಸ್ಪರ್ಧೆ ಮಾಡಿದೆ.

ಈ ವೇಳೆ ಸಾವಿರಾರು ಅಭಿಮಾನಿಗಳು ನನಗೆ ಧೈರ್ಯ ನೀಡಿ, ನೀವು ಚುನಾವಣೆಯಲ್ಲಿ ಸ್ಪರ್ಧೆ ಮಾಡಿ, ನಾವು ನಿಮ್ಮೊಂದಿಗೆ ಇದ್ದೇವೆ ಎಂದು ಹೇಳಿದ್ದಕ್ಕೆ ಚುನಾವಣೆಗೆ ನಿಂತಿದ್ದೆ ಎಂದರು.

ಧಾರವಾಡ ಜಿಲ್ಲೆಯ ಅದರಗುಂಚಿ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹಾಗೂ ಬಿ.ಎಲ್.ಸಂತೋಷ ಕರ್ನಾಟಕ ರಾಜ್ಯಕ್ಕೆ ನಾನೇ ಪ್ರಧಾನ ಮಂತ್ರಿ ನಾನೇ ಮುಖ್ಯಮಂತ್ರಿ ಎನ್ನುವ ರೀತಿ ವರ್ತನೆ ತೋರಿದ್ದಾರೆ. ಈ ಮೂಲಕ ನನಗೆ ಅನ್ಯಾಯ, ದ್ರೋಹ, ಮೋಸ ಮಾಡಿದ್ದಾರೆ. ಈ ಮೂರು ಕಾರಣದಿಂದ ನಾನು ಪಕ್ಷೇತರ ಅಭ್ಯರ್ಥಿಯಾಗಿ ಚುನಾವಣೆಗೆ ಸ್ಪರ್ಧೆ ಮಾಡಿದೆ.

ಈ ವೇಳೆ ಸಾವಿರಾರು ಅಭಿಮಾನಿಗಳು ನನಗೆ ಧೈರ್ಯ ನೀಡಿ, ನೀವು ಚುನಾವಣೆಯಲ್ಲಿ ಸ್ಪರ್ಧೆ ಮಾಡಿ, ನಾವು ನಿಮ್ಮೊಂದಿಗೆ ಇದ್ದೇವೆ ಎಂದು ಹೇಳಿದ್ದಕ್ಕೆ ಚುನಾವಣೆಗೆ ನಿಂತಿದ್ದೆ ಎಂದರು.

# ದಿಟ್ಟ ನಿರ್ಧಾರ ತೆಗೆದುಕೊಳ್ಳಲು ಸಹಕಾರ ನೀಡಿದ್ದಕ್ಕೆ ಅಧಿಕಾರಿಗಳಿಗೆ ಧನ್ಯವಾದ ತಿಳಿಸಿದ ಹಂಗಾಮಿ ಸಿಎಂ

ಬೆಂಗಳೂರು: ನನ್ನ ಆಡಳಿತ ಅವಧಿಯಲ್ಲಿ ದಿಟ್ಟ ನಿರ್ಧಾರ ತೆಗೆದುಕೊಳ್ಳಲು ಸಹಕಾರ ನೀಡಿರುವುದಕ್ಕೆ ಧನ್ಯವಾದಗಳು ಎಂದು ಹಂಗಾಮಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.



ಇಂದು ಗೃಹ ಕಚೇರಿ ಕೃಷ್ಣಾದಲ್ಲಿ ರಾಜ್ಯ ಸರ್ಕಾರದ ಅಧಿಕಾರಗಳಿಗೆ ಚಹಾ ಕೂಟ ಏರ್ಪಡಿಸಿ ಅನೌಪಚಾರಿಕವಾಗಿ ಮಾತನಾಡಿದರು.

ನಾವು ಸಂವಿಧಾನ ಒಪ್ಪಿಕೊಂಡಿದ್ದೇವೆ. ಆಡಳಿತದಲ್ಲಿ ಕಾರ್ಯಾಂಗ, ಶಾಸಕಾಂಗ ಎರಡೂ ಪ್ರಮುಖ ಪಾತ್ರ ವಹಿಸುತ್ತವೆ. ನಾವು ಅದರ ಅಡಿಯಲ್ಲಿ ಕೆಲಸ ಮಾಡುತ್ತಿದ್ದೇವೆ. ನಾನು ಅಧಿಕಾರಕ್ಕೆ ಬಂದಾಗ ಕೋವಿಡ್, ಪ್ರವಾಹ ಸಂದರ್ಭ ಎದುರಾಯಿತು.

ಎಲ್ಲವನ್ನೂ ಯಶಸ್ವಿಯಾಗಿ ನಿಭಾಯಿಸಿದ್ದೇವೆ. ನಮ್ಮ ಆಡಳಿತದಲ್ಲಿ ಯಾವುದೇ ಹಿಂಸಾತ್ಮಕ ಚಟುವಟಿಕೆಗಳು ನಡೆಯಲಿಲ್ಲ. ಚುನಾವಣೆ ಸಂದರ್ಭದಲ್ಲಿಯೂ ಯಾವುದೇ ಅಹಿತಕರ ಘಟನೆ ನಡೆಯದಿಲ್ಲ. ಗೃಹ ಇಲಾಖೆಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ನಾವು ಅನೇಕ ಮಹತ್ವದ ನಿರ್ಧಾರಗಳನ್ನು ತೆಗೆದುಕೊಂಡಿದ್ದೇವೆ.

ಮೀಸಲಾತಿ ಹೆಚ್ಚಳ, ಸರ್ಕಾರಿ ನೌಕರ ಸವಾಲು, ಹೊಸ ನೀತಿಗಳನ್ನು ಜಾರಿಗೆ ತಂದಿದ್ದೇವೆ.

ಉದ್ಯೋಗ ನೀತಿ, ಕೈಗಾರಿಕಾ ನೀತಿ ಎಲ್ಲ ಹೊಸ ಯೊಜನೆಗಳ ತರಲು ಅಧಿಕಾರಿಗಳ ಪಾತ್ರ ಮಹತ್ವದ್ದು, ನಿಮ್ಮ ಸಹಕಾರ ಅತ್ಯಂತ ಮುಖ್ಯವಾಗಿತ್ತು ಎಂದರು.

ನಾವು ಐದು ವರ್ಷಕ್ಕೆ ಬರುವವರು, ನಿವು ಸುದೀರ್ಘ ಅಧಿಕಾರದಲ್ಲಿ ಇರುವವರು. ರಾಜ್ಯದ ಏಳಿಗೆಗೆ ಎಲ್ಲರೂ ಶ್ರಮಿಸೋಣ.

ಕೆಲಸ ವೇಗವಾಗಿ ಆಗಲಿ ಅಂತ ನಾನು ಗಟ್ಟಿ ಧನಿಯಲ್ಲಿ ಹೇಳಿರಬಹುದು. ಆದರೆ ಯಾವುದೇ ವಯಕ್ತಿಕ ಅಭಿಪ್ರಾಯ ಇರಲಿಲ್ಲ ಎಂದರು.

ಕರ್ನಾಟಕ ಹಲವಾರು ವಿಚಾರದಲ್ಲಿ ಮುಂಚೂಣಿಯಲ್ಲಿದೆ. ಜಿಎಸ್ಟಿಯಲ್ಲಿ ಮುಂಚೂಣಿಯಲ್ಲಿದ್ದೇವೆ. ಬಂಡವಾಳ ಸೆಳೆಯುವಲ್ಲಿ ನಂಬರ್ ಒನ್ ಸ್ಥಾನದಲ್ಲಿದ್ದೇವೆ. ಕರ್ನಾಟಕದ ಅಭಿವೃದ್ಧಿಗೆ ಅಧಿಕಾರಿಗಳ ಪಾತ್ರ ಮುಖ್ಯವಾಗಿದ್ದು, ರಾಜ್ಯದ ಅಭಿವೃದ್ಧಿಗೆ ಎಲ್ಲರೂ ಕೆಲಸ ಮಾಡೋಣ ಎಂದರು.

# ಲೌಕಿಕ ಶಿಕ್ಷಣ ಜೊತೆಗೆ ಧಾರ್ಮಿಕ ಶಿಕ್ಷಣ–ಸಂಸ್ಕಾರ ಅಗತ್ಯ: ರವಿರಾಜ ಪಾಟೀಲ

ಬೆಳಗಾವಿ; ಇಂದಿನ ಮಕ್ಕಳಿಗೆ ಲೌಕಿಕ ಶಿಕ್ಷಣ ಜೊತೆಗೆ ಧಾರ್ಮಿಕ ಶಿಕ್ಷಣ ಮತ್ತು ಧಾರ್ಮಿಕ ಸಂಸ್ಕಾರ ನೀಡಿವುದು ಅಗತ್ಯವಾಗಿದೆ ಎಂದು ಜೈನ ಸಮಾಜದ ಮುಖಂಡರಾದ ಹಾಗೂ ಹಿರಿಯ ನ್ಯಾಯವಾದಿ ರವಿರಾಜ ಪಾಟೀಲ ಅವರು ಇಂದಿಲ್ಲಿ ಹೇಳಿದರು.



ಬೆಳಗಾವಿ ಅನಗೋಳದಲ್ಲಿ ಶ್ರೀ ಆದಿನಾಥ ಸಾಂಸ್ಕೃತಿಕ ಭವನದಲ್ಲಿ ಜೈನ ಆಗಮ ಮಿಷನ ವತಿಯಿಂದ ಆಯೋಜಿಸಲಾದ ಐದು ದಿನಗಳ 7ನೇ ಜೈನ ಧಾರ್ಮಿಕ ಶಿಕ್ಷಣ ಶಿಬಿರ "ಜ್ಞಾನ–2023 " ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದಿ ನಾವೆಲ್ಲರೂ ಮಕ್ಕಳಿಗೆ ಲೌಕಿಕ ಶಿಕ್ಷಣ ನೀಡಬಲ್ಲೇವು. ಆದರೆ ಮಕ್ಕಳ ಉತ್ತಮ ಭವಿಷ್ಯವನ್ನು ರೂಪಿಸಬೇಕಾದರೆ ಅವರಿಗೆ ಧಾರ್ಮಿಕ ಶಿಕ್ಷಣ ಮತ್ತು ಧಾರ್ಮಿಕ ಸಂಸ್ಕಾರವೂ ಸಹ ಅಗತ್ಯವಾಗಿದೆ ಎಂದು ಅವರು ಹೇಳಿದರು.

ಇಂದು ಜೈನ ಸಮಾಜ ಅಲ್ಪ ಸಂಖ್ಯಾತರಲ್ಲಿದೆ. ಆದರೆ ಉತ್ತಮ ಜೀವನ, ವ್ಯವಹಾರ ನಡೆಸುವಲ್ಲಿ ಸಮಾಜ ಮುಂದುವರೆದಿದೆ. ಇದಕ್ಕೆ ಕಾರಣ ನಮ್ಮಲ್ಲಿನ ಸಂಸ್ಕಾರ, ಈ ಸಂಸ್ಕಾರವನ್ನು ಮುಂಬರುವ ಯುವಪಿಳಿಗೆಗೆ ನೀಡಿವುದು ಅತ್ಯಾವಶಕವಾಗಿದೆ. ಜೈನ ಧರ್ಮ ಮತ್ತು ಸಂಸ್ಕಾರವನ್ನು ಮಕ್ಕಳಿಗೆ ಕಲಿಸಿದರೆ ಮಾತ್ರ ಧರ್ಮ ಮತ್ತು ಸಮಾಜ ಉಳಿಯಲು ಸಾಧ್ಯ ಎಂದು ಅವರು ತಿಳಿಸಿದರು.

ಸಮಾರಂಭದಲ್ಲಿ ಜಿನಶಾಸ್ತ್ರಗಳ ಬಿಡುಗಡೆ ಮಾಡಲಾಯಿತು. ವೇದಿಕೆ ಮೇಲೆ ಅನಗೋಳದ ಹಿರಿಯ ನಾಗರಿಕರಾದ ಪ್ರಮೋದ ಪಾಟೀಲ, ರಾಜಶೇಖರ ಭೇಂಡಿಗೇರಿ ದಂಪತಿಗಳು, ಆಗಮ ಮಿಷನ ಸಂಸ್ಥೆಯ ಸಂಚಾಲಕರಾದ ಪುಷ್ಪಕ ಹನಮಣ್ಣವರ, ದೇವೇಂದ್ರ ವಣಕ್ರಾಮ ಮಹಾವೀರ ದೊಡ್ಡಣ್ಣವರ, ಅನಗೋಳ ದೊಡ್ಡ ಬಸದಿ, ಚಿಕ್ಕ ಬಸದಿ, ಆಡಳಿತ ಮಂಡಳಿಯ ಸದಸ್ಯರು, ಯುವಕ ಮಂಡಳದ ಹಾಗೂ ಮಹಿಳಾ ಮಂಡಳದ ಸದಸ್ಯರು ಸೇರಿದಂತೆ ಮೊದಲಾದವರು ಉಪಸ್ಥಿತರಿದ್ದರು. ರಾಜೇಂದ್ರ ಹನಮಣ್ಣವರ ಅತಿಥಿಗಳನ್ನು ಸ್ವಾಗತಿಸಿದರು. ಮಿಥುನ ಶಾಸ್ತ್ರೀ ಮತ್ತು ಅನೇಕಾಂತ ಶಾಸ್ತ್ರೀ ಕಾರ್ಯಕ್ರಮ ನಿರೂಪಿಸಿ ಧಾರ್ಮಿಕ ಶಿಕ್ಷಣ ಕುರಿತು ವಿದ್ಯಾರ್ಥಿಗಳಿಗೆ ಪಾಠ ಮಾಡಿದರು.

ಈ ಐದು ದಿನಗಳ ಧಾರ್ಮಿಕ ಶಿಕ್ಷಣ ಶಿಬಿರದಲ್ಲಿ ಸುಮಾರು 450 ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು.

ಮಿಥುನ ಶಾಸ್ತ್ರೀ ಮತ್ತು ಅನೇಕಾಂತ ಶಾಸ್ತ್ರೀ ಇವರು ಮಕ್ಕಳಿಗೆ ಜೈನ ಧರ್ಮದ ಮಹತ್ವ, ಪೂಜೆ ಪುನಸ್ಕಾರ, ಣಮೋಕಾರ ಮಂತ್ರ ಪಠಣ, ಮತ್ತು ಅದರ ಮಹತ್ವ, ತೀರ್ಥಂಕರರ ಅಭಿಷೇಕ, ಮುನಿಗಳಿಗೆ ಆಹಾರ ನೀಡುವ ಪದ್ದತಿ, ನೋಂಪಿ ಬೆಳಗುವುದು, ಆಚಾರ – ವಿಚಾರ, ಆಹಾರ ಪದ್ದತಿ ಸೇವನೆ, ಸೇರದಂತೆ ವಿವಿಧ ಧಾರ್ಮಿಕ ಶಿಕ್ಷಣದ ಬಗ್ಗೆ ಪ್ರಭೋದನ ಮಾಡಿದರು.

# ಸಿದ್ದರಾಮಯ್ಯನವರೇ ಸಿಎಂ ಆಗ್ತಾರೆ; ನಾನೂ ಸಚಿವನಾಗುತ್ತೇನೆ: ಶಾಸಕ ಕೆ.ಎನ್.ರಾಜಣ್ಣ

ತುಮಕೂರು: ಮಾಜಿ ಸಿಎಂ ಸಿದ್ದರಾಮಯ್ಯನವರೇ ನೂರಕ್ಕೆ ನೂರರಷ್ಟು ಮುಖ್ಯಮಂತ್ರಿ ಆಗ್ತಾರೆ ಎಂದು ಶಾಸಕ ಕೆ.ಎನ್. ರಾಜಣ್ಣ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ತುಮಕೂರಿನಲ್ಲಿ ಮಾತನಾಡಿದ ಕೆ.ಎನ್.ರಾಜಣ್ಣ, ಸಿದ್ದರಾಮಯ್ಯ ಮುಖ್ಯಮಂತ್ರಿ ಆಗ್ತಾರೆ. ಮೇ 18ರಂದು ನೂತನ ಮುಖ್ಯಮಂತ್ರಿ ಪ್ರಮಾಣ ವಚನ ಸ್ವೀಕಾರ ಮಾಡಲಿದ್ದಾರೆ. ಹೈಕಮಾಂಡ್ ಒಲವು ಕೂಡ ಸಿದ್ದರಾಮಯ್ಯ ಪರವಾಗಿಯೇ ಇದೆ. ಇದಕ್ಕೆ ಡಿ.ಕೆ.ಶಿವಕುಮಾರ್ ಕೂಡ ಸಹಕಾರ ಕೊಡುತ್ತಾರೆ ಎಂದರು.

ನೂತನ ಸಿಎಂ ವಿಚಾರ ಇಂದು ಫೈನಲ್ ಆಗಲೇಬೇಕು. ಸಧ್ಯಕ್ಕೆ ಸಿದ್ದರಾಮಯ್ಯ ಒಬ್ಬರೇ ಪ್ರಮಾಣವಚನ ಸ್ವೀಕರಿಸಬಹುದು. ಸಚಿವ ಸಂಪುಟ ಸ್ವಲ್ಪ ತಡವಾಗಬಹುದು. ಇನ್ನು ಮೊದಲ ಸಂಪುಟದಲ್ಲೇ ಅನ್ನಭಾಗ್ಯ ಯೋಜನೆ ಜಾರಿ ಮಾಡುತ್ತೇವೆ ಎಂದರು.

ನಾನು ಕೂಡ ಸಚಿವ ಸ್ಥಾನದ ಆಕಾಂಕ್ಷಿ. ನಾನು ಸಚಿವನಾಗುತ್ತೇನೆ, ಸಹಕಾರ ಖಾತೆ ನೀಡಬೇಕು ಎಂಬುದು ನನ್ನ ಆಶಯ ಎಂದು ಇದೇ ವೇಳೆ ತಿಳಿಸಿದ್ದಾರೆ.

# ಪರಿಶಿಷ್ಟ ಜನಾಂಗದ ಮುಖ್ಯಮಂತ್ರಿಯನ್ನು ಘೋಷಣೆ ಮಾಡಿ: ಹುಣಸನಹಳ್ಳಿ ವೆಂಕಟೇಶ್ ಆಗ್ರಹ

ಬಂಗಾರಪೇಟೆ: ರಾಜ್ಯದಲ್ಲಿ ಕಾಂಗ್ರೆಸ್ ಏಕಪಕ್ಷೀಯವಾಗಿ ಸರ್ಕಾರ ನಡೆಸಲು ಕಾರಣಭೂತರಾದ ದಲಿತ ಸಂಘಟನೆಗಳ ಒಕ್ಕೂಟದ ಬೆಂಬಲವಾಗಿ ಆಡಳಿತ ಪಕ್ಷವಾಗಿ ಕಾಂಗ್ರೆಸ್ ಪಕ್ಷ ಹೊರಹೊಮ್ಮಿದ್ದು, ಈ ನಿಟ್ಟಿನಲ್ಲಿ ಪರಿಶಿಷ್ಟ ಜನಾಂಗದ ಮಲ್ಲಿಕಾರ್ಜುನ ಖರ್ಗೆ, ಜಿ.ಪರಮೇಶ್ವರ್ ಇವರಿಬ್ಬರಲ್ಲಿ ಒಬ್ಬರಿಗೆ ರಾಜ್ಯದ ಮುಖ್ಯಮಂತ್ರಿಯನ್ನಾಗಿ ಮಾಡಲು ಕರ್ನಾಟಕ ದಲಿತ ರೈತಸೇನೆಯ ಅಧ್ಯಕ್ಷ ಹುಣಸನಹಳ್ಳಿ ವೆಂಕಟೇಶ್ ಆಗ್ರಹಿಸಿದರು.



ಅವರು ಪತ್ರಿಕಾ ಹೇಳಿಕೆ ನೀಡಿ, ದೇಶದಲ್ಲಿ ಬಂದು 75ವರ್ಷಗಳು ಕಳೆದರೂ ಈ ರಾಜ್ಯದಲ್ಲಿ ಒಬ್ಬ ಪರಿಶಿಷ್ಟ ಜನಾಂಗದ ನಾಯಕನನ್ನು ಮುಖ್ಯಮಂತ್ರಿಯನ್ನಾಗಿ ಮಾಡದ ಸರ್ಕಾರಗಳಿಗೆ ನನ್ನ ಧಿಕ್ಕಾರ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರಕ್ಕೆ ಪರಿಶಿಷ್ಟ ಜಾತಿ, ಅಲ್ಪಸಂಖ್ಯಾತರು, ಅತಿ ಹೆಚ್ಚಿನ ಮತಗಳನ್ನು ನೀಡಿ ಅಧಿಕಾರದ ಚುಕ್ಕಾಣೆ ಹಿಡಿಯಲು ಅವಕಾಶ ಕಲ್ಪಿಸಿದ್ದರೂ ಸಹ ಅಧಿಕಾರ ನೀಡದೇ ಮಲತಾಯಿ ಧೋರಣೆ ಎಸಗುತ್ತಿದ್ದಾರೆ. ಆಗಾಗಿ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಆಶಯದಂತೆ ನನ್ನ ಜನ ಈ ದೇಶವನ್ನು ಆಳಬೇಕು, ಎಂಬ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷವು ಹಿರಿಯ ಮುತ್ಸದಿಗಳಾದ ಮಲ್ಲಿಖಾರ್ಜುನ ಖರ್ಗೆ, ಜಿ.ಪರಮೇಶ್ವರ್ ರವರನ್ನು ಈ ರಾಜ್ಯದ ಮುಖ್ಯಮಂತ್ರಿಯನ್ನಾಗಿ ಮಾಡಬೇಕೆಂದು ಹಾಗೂ ಬಂಗಾರಪೇಟೆ ಮೀಸಲು ವಿಧಾನಸಭಾ ಕ್ಷೇತ್ರದಲ್ಲಿ ಸತತವಾಗಿ ಮೂರನೇ ಭಾರಿ ಅಧಿಕಾರದ ಚುಕ್ಕಾಣಿಯನ್ನಿಡಿದಿರುವ ಎಸ್.ಎನ್.ನಾರಾಯಣಸ್ವಾಮಿ ಅವರನ್ನು ಸಚಿವರನ್ನಾಗಿ ಮಾಡಬೇಕೆಂದು ಒತ್ತಾಯಿಸುತ್ತೇವೆ.

ಈ ಸಂದರ್ಭದಲ್ಲಿ ಗೌರವಾಧ್ಯಕ್ಷ ಹುಳದೇನಹಳ್ಳಿ ವೆಂಕಟೇಶ್, ಹಿರೇಕರಪನಹಳ್ಳಿ ಮುನಿರಾಜು, ಹುಣಸನಹಳ್ಳಿ ಸತೀಶ್‌ಕುಮಾರ್, ಪ್ರತಾಪ್, ಹಾಗೂ ಇತರರು ಉಪಸ್ಥಿತರಿದ್ದರು.

# ಭಾರತದಲ್ಲಿ 500 ಉದ್ಯೋಗಿಗಳ ವಜಾಗೊಳಿಸಿದ ಅಮೆಜಾನ್

ನವದೆಹಲಿ: ಅಮೆಜಾನ್ ಭಾರತದಲ್ಲಿ ವಿವಿಧ ಹಂತಗಳಲ್ಲಿ ಸುಮಾರು 500 ಉದ್ಯೋಗಿಗಳನ್ನು ವಜಾಗೊಳಿಸಿದೆ ಎಂದು ವರದಿಗಳು ತಿಳಿಸಿವೆ.

ಈ ವರ್ಷದ ಮಾರ್ಚ್‌ನಲ್ಲಿ ಜಾಗತಿಕ ಮಟ್ಟದ ಉದ್ಯೋಗ ಕಡಿತವನ್ನು ಅಮೆಜಾನ್ ಘೋಷಣೆ ಮಾಡಿತ್ತು. ಅದರ ಪ್ರಕಾರವಾಗಿ ಸದ್ಯ ವಜಾ ಪ್ರಕ್ರಿಯೆ ನಡೆದಿದೆ. ಉದ್ಯೋಗ ಕಡಿತ ಮಾಡುವ ಅಮೆಜಾನ್‌ನ ನಿರ್ಧಾರದಿಂದಾಗಿ ಜಾಗತಿಕವಾಗಿ 9,000 ಸಿಬ್ಬಂದಿ ನೌಕರಿ ಕಳೆದುಕೊಳ್ಳುವ ಆತಂಕವಿದೆ.

ಕೊಚ್ಚಿ ಮತ್ತು ಲಕ್ನೋದಂತಹ ನಗರಗಳಲ್ಲಿ ಅಮೆಜಾನ್‌ನ ಹಲವು ವಿಭಾಗಗಳನ್ನು ಮುಚ್ಚಲಾಗಿದೆ. ಅಮೆಜಾನ್ ಡಿಜಿಟಲ್ ಕೇಂದ್ರಗಳನ್ನು ಸ್ಥಗಿತಗೊಳಿಸಲಾಗಿದೆ ಎಂದು ಸುದ್ದಿ ಮಾಧ್ಯಮ 'ಮನಿ ಕಂಟ್ರೋಲ್' ವರದಿ ಮಾಡಿದೆ.

ನಮ್ಮ ವಾರ್ಷಿಕ ವಹಿವಾಟು ನಿರ್ವಹಣೆ ಯೋಜನೆ ಪರಾಮರ್ಶೆ ಭಾಗವಾಗಿ ಪ್ರತಿ ವಹಿವಾಟನ್ನು ವಿಮರ್ಶಿಸುತ್ತೇವೆ ಮತ್ತು ನಮಗೆ ಅಗತ್ಯವೆಸಿದ ಬದಲಾವಣೆ ಮಾಡುತ್ತೇವೆ ಎಂದು ಕಂಪನಿಯ ವಕ್ತಾರರು ಈ ಹಿಂದೆ ಹೇಳಿದ್ದರು.

ಈಗ ಆರಂಭವಾಗಿರುವ ಉದ್ಯೋಗ ಕಡಿತ ಮುಂದಿನ ವರ್ಷದವರೆಗೂ ಮುಂದುವರಿಯಲಿದೆ ಎಂದು ಕಂಪನಿ ಹೇಳಿದೆ.

# ಸೌಮ್ಯ ರೆಡ್ಡಿಗೆ ಆಗಿರುವ ಅನ್ಯಾಯದ ವಿರುದ್ಧ ಹೋರಾಟ: ರಾಮಲಿಂಗಾರೆಡ್ಡಿ

ಬೆಂಗಳೂರು: ಇತ್ತೀಚೆಗೆ ನಡೆದ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಪುತ್ರಿ ಸೌಮ್ಯ ರೆಡ್ಡಿ ಆಗಿರುವ ಅನ್ಯಾಯದ ವಿರುದ್ಧ ಹೋರಾಟ ನಡೆಸಲಾಗುವುದು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಹೇಳಿದ್ದಾರೆ.



ಜಯನಗರದ ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾ ಅವರಿಗೆ ಅನ್ಯಾಯವಾಗಿದೆ ಎಂದ ಅವರು, ಈ ಬಗ್ಗೆ ಪಕ್ಷ ಕಾನೂನು ಹೋರಾಟ ನಡೆಸಲಾಗುವುದು ಎಂದು ತಿಳಿಸಿದರು.

ಚುನಾವಣಾ ಅಧಿಕಾರಿಯು ಅಸಿಂಧು ಎಂದು ಪರಿಗಣಿಸಿದ 250 ಮತಗಳನ್ನು ಕೆಲವು ಕಾಣದ ಕೈಗಳ ಒತ್ತಡದಿಂದಾಗಿ ಎಣಿಕೆ ಪ್ರಕ್ರಿಯೆಯಲ್ಲಿ ಸೇರಿಸಿರುವುದು ನಮಗೆ ಆಶ್ಚರ್ಯ ತಂದಿದೆ. ಒಂದು ಬಾರಿ ಅಸಿಂಧು ಎಂದು ಪರಿಗಣಿಸಿದ ಮತಗಳನ್ನು ಮತ ಎಣಿಕೆ ಪ್ರಕ್ರಿಯೆಯಲ್ಲಿ ಸೇರಿಸುವಂತಿಲ್ಲ .

ಮರು ಮತ ಎಣಿಕೆ ಪ್ರಕ್ರಿಯೆಯಲ್ಲಿ ಉತ್ತರಪ್ರದೇಶದ ಕೆಲವು ರಾಜಕಾರಣಿಗಳು ಮತ್ತು ಮಾಜಿ ಸಚಿವ ಆರ್ ಅಶೋಕ ಮತ್ತು ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಅವರ ಪ್ರಭಾವವಿದೆ ಎಂದು ಆರೋಪಿಸಿದರು.

ಚುನಾವಣಾಧಿಕಾರಿಗಳ ಕೊಠಡಿಯೊಳಗೆ ವೀಕ್ಷಕರು ಕುಳಿತಿದ್ದರು ಎಂದು ಆರೋಪಿಸಿದ ರೆಡ್ಡಿ, ಅಲ್ಲಿದ್ದ ತೇಜಸ್ವಿ ಸೂರ್ಯ ಮತ್ತು ಅಶೋಕ ಅಭ್ಯರ್ಥಿಗಳ ಏಜೆಂಟರೂ ಅಲ್ಲ, ಅಭ್ಯರ್ಥಿಗಳೂ ಅಲ್ಲ. ಉತ್ತರ ಪ್ರದೇಶದ ವ್ಯಕ್ತಿಯೊಬ್ಬರು ತಮ್ಮ ಪ್ರಭಾವ ಬಳಸಿ ಈ ರೀತಿ ಮಾಡಿದ್ದಾರೆ ಎಂದು ಅವರು ಹೇಳಿದರು.

ತಮ್ಮಗೆ ಆಗಿರುವ ಘೋರ ಅನ್ಯಾಯ"ದ ವಿರುದ್ಧ ಹೋರಾಡುತ್ತೇನೆ ಎಂದು ಸೌಮ್ಯ ರೆಡ್ಡಿ ತಿಳಿಸಿದ್ದಾರೆ. ಚುನಾವಣಾ ಆಯೋಗದ ಅಧಿಕೃತ ವೆಬ್ಸೈಟ್ ಪ್ರಕಾರ, ಅವರು ಕೊನೆಯ ಸುತ್ತಿನಲ್ಲಿ ಸುಮಾರು 160 ಮತಗಳಿಂದ ಮುಂದಿದ್ದರು.

# ಸೋತ ಮೇಲೆ ಬಿಎಸ್‌ವೈ ಕಾಲ್ ಮಾಡಿಲ್ಲ: ವಿ. ಸೋಮಣ್ಣ ಭಾವುಕ

ವಿಜಯನಗರ: ಹೈಕಮಾಂಡ್ ಕೊಟ್ಟ ಕೆಲಸ ಮಾಡಿದ್ದೇನೆ ಎಂದು ಮಾಜಿ ಸಚಿವ ವಿ. ಸೋಮಣ್ಣ ಭಾವುಕರಾದರು. ಈ ಸಂಬಂಧ ಮಾತಾಡಿದ ವಿ. ಸೋಮಣ್ಣ, ಎರಡು ಕ್ಷೇತ್ರಗಳಲ್ಲೂ ಹೀನಾಯ ಸೋಲಾಗಿದೆ. ಇದಕ್ಕೆ ಹಲವಾರು ಕಾರಣಗಳಿವೆ ಎಂದರು.



ಚಿನ್ನದಂತ ಗೋವಿಂದರಾಜನಗರ ಕ್ಷೇತ್ರ ಬಿಟ್ಟು ಹೋಗಿದ್ದೇನೆ. ದಿನ ಬೆಳಗ್ಗೆ ಎದ್ದು ಜನಕ್ಕೆ ಸಹಾಯ ಮಾಡುತ್ತಿದ್ದೆ. ಸೋಲಿನ ಬಳಿಕ ಹೊಸ ಕೆಲಸ ಹುಡುಕಬೇಕಿದೆ. ನನಗೆ ಸೋಲನ್ನು ಅರಗಿಸಿಕೊಳ್ಳುವ ಶಕ್ತಿಯಿದೆ ಎಂದರು.

ಸಿಎಂ ಪರಿಸ್ಥಿತಿಯನ್ನು ಅವಲೋಕನ ಮಾಡಿ ಬಂದಿದ್ದಾರೆ. ನಾನು ಯಾವುದೇ ಅವಕಾಶಗಳು ಬೇಕು ಎಂದು ಕೇಳಿದವನಲ್ಲ. ಪಕ್ಷ ಹೇಳಿದ್ದನ್ನು ಮಾಡಿದ್ದೇನೆ. ಯಾರು ತೆಗೆದುಕೊಳ್ಳ ರಿಸ್ಕ್ ಮಾಡಿದ್ದೇನೆ. ಕೆಲವೊಮ್ಮೆ ಒಳ ಏಟುಗಳ ಬಿದ್ದಾಗ ಹೀಗೆ ಆಗುತ್ತದೆ ಎಂದು ಹೇಳಿದರು. ಕಾಲವೇ ಪ್ರತಿಯೊಂದಕ್ಕು ಉತ್ತರ ನೀಡಲಿದೆ. ನನಗೆ ಇದುವರೆಗೂ ಯಡಿಯೂರಪ್ಪ ಕರೆ ಮಾಡಿಲ್ಲ. ಚುನಾವಣೆಗೆ ಮುನ್ನ ಪ್ರತೀ ದಿನ ಕಾಲ್ ಮಾಡುತ್ತಿದ್ದರು.

ಎಲೆಕ್ಷನ್ ಮುಗಿದ ಮೇಲೆ ಇಲ್ಲ. ನಾನು 45 ವರ್ಷಗಳಿಂದ ರಾಜಕೀಯದಲ್ಲಿ ಇದ್ದೇನೆ. ನನಗೆ ಯಾರು ಧೈರ್ಯ ತುಂಬುವ ಅಗತ್ಯ ಇಲ್ಲ ಎಂದರು.

# ಸಂಸ್ಕಾರದಿಂದ ಜೀವನ ವಿಕಾಸ ಸಾಧ್ಯ: ಶ್ರೀ ರಂಭಾಪುರಿ ಜಗದ್ಗುರುಗಳು

ಖಾನಾಪುರ : ಜೀವನದ ಉನ್ನತಿಗೆ ಧರ್ಮ ದಿಕ್ಸೂಚಿ. ಧರ್ಮ ಪರಿಪಾಲನೆಯಿಂದ ಸುಖ ಶಾಂತಿ ಪ್ರಾಪ್ತಿ. ಸಂಸ್ಕಾರದಿಂದ ಮನುಷ್ಯ ಜೀವನ ವಿಕಾಸಗೊಳ್ಳಲು ಸಾಧ್ಯವಾಗುವುದೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.



ಅವರು ಮಂಗಳವಾರ ತಾಲೂಕಿನ ಕಕ್ಕೇರಿ ಗ್ರಾಮದಲ್ಲಿ ಶ್ರೀ ವೀರಭದ್ರಸ್ವಾಮಿ ಪ್ರತಿಷ್ಠಾಪನೆ ಅಂಗವಾಗಿ ಜರುಗಿದ ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಭಾರತ ದೇಶ ಧರ್ಮ ಪ್ರಧಾನವಾದ ದೇಶ. ಇಲ್ಲಿ ಹಲವಾರು ಧರ್ಮಗಳು ಇದ್ದು ಆಯಾ ಧರ್ಮಗಳ ಆಚರಣೆ ಭಿನ್ನವಾಗಿವೆ. ಆದರೆ ಆ ಎಲ್ಲ ಧರ್ಮಗಳ ಗುರಿ ಮಾನವ ಕಲ್ಯಾಣವೇ ಆಗಿದೆ. ವೀರಶೈವ ಧರ್ಮ ಸಕಲರಿಗೂ ಒಳಿತನ್ನೇ ಬಯಸುತ್ತಾ ಬಂದಿದೆ. ಪ್ರತಿಯೊಬ್ಬ ಮನುಷ್ಯ ಧರ್ಮ, ದೇವರು ಮತ್ತು ಗುರುವನ್ನು ಮರೆಯಬಾರದು. ಮನುಷ್ಯ ಕೊಟ್ಟಿದ್ದು ಮನೆತನಕ. ಆದರೆ ದೇವರು ಕೊಟ್ಟಿದ್ದು ಕೊನೆಯವರೆಗೂ ಇರುತ್ತದೆ. ದೇವರಲ್ಲಿ ನಂಬಿಗೆ ಧರ್ಮದಲ್ಲಿ ಶ್ರದ್ಧೆ ಇರಬೇಕು. ಶ್ರೀ ಜಗದ್ಗುರು ರೇಣುಕಾಚಾರ್ಯರು ಜೀವನ ವಿಕಾಸಕ್ಕೆ ದಶಧರ್ಮ ಸೂತ್ರ ಬೋಧಿಸಿದ್ದಾರೆ. ಶ್ರೀ ವೀರಭದ್ರಸ್ವಾಮಿ ಶ್ರೀ ರಂಭಾಪುರಿ ಪೀಠದ ಕ್ಷೇತ್ರನಾಥ ಮತ್ತು ಗೋತ್ರ ಪುರುಷನಾಗಿ ಪೂಜೆಗೊಳ್ಳುತ್ತಿದ್ದಾನೆ. ಆ ವೀರಭದ್ರಸ್ವಾಮಿ ಕಕ್ಕೇರಿಯಲ್ಲಿ ನೆಲೆಗೊಂಡು ಪೂಜೆಗೊಳ್ಳುತ್ತಿದ್ದಾನೆ. ದೇವಸ್ಥಾನದ ಸಮಿತಿಯವರು ಹಮ್ಮಿಕೊಂಡ ಕಾರ್ಯಕ್ರಮಕ್ಕೆ ಗ್ರಾಮದವರೆಲ್ಲರೂ ಒಗ್ಗಟ್ಟಿನಿಂದ ಸಹಕಾರ ನೀಡಿರುವುದು ತಮಗೆ ಅಪಾರ ಸಂತೋಷ ತಂದಿದೆ ಎಂದರು.

ಸಮಾರಂಭವನ್ನು ಖಾನಾಪುರ ಕ್ಷೇತ್ರದ ನೂತನ ಶಾಸಕ ವಿಠ್ಠಲ ಹಲಗೇಕರ ಉದ್ಘಾಟಿಸಿ ಮಾತನಾಡಿದರು. ಸಂಗೊಳ್ಳಿ ಹಿರೇಮಠದ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳು ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿರಕೋಳ ಹಿರೇಮಠದ ಗುರುಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು 5 ದಿನಗಳ ಕಾಲ ಪ್ರವಚನ ಮಾಡಿ ಜಾಗೃತಿ ಮೂಡಿಸಿದರು. ಹಿಡಕಲ್ ಅಡವಿಸಿದ್ಧೇಶ್ವರ ಶ್ರೀಗಳು ಉಪಸ್ಥಿತರಿದ್ದರು. ಹಲವಾರು ಗಣ್ಯರಿಗೆ ಹಾಗು ದಾನಿಗಳಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಗುರುರಕ್ಷೆಯಿತ್ತು ಶುಭ ಹಾರೈಸಿದರು.

ಸಮಾರಂಭಕ್ಕೂ ಮುನ್ನ ಗ್ರಾಮದ ಬಿಷ್ಟಾದೇವಿ ದೇವಸ್ಥಾನದಿಂದ ಶ್ರೀ ವೀರಭದ್ರಸ್ವಾಮಿ ದೇವಸ್ಥಾನದ ವರೆಗೆ ಶ್ರೀ ರಂಭಾಪುರಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ಸಂಭ್ರಮದಿಂದ ಜರುಗಿತು. ಕುಂಭ ಹೊತ್ತ ಮಹಿಳೆಯರು, ಆರತಿ ಹಿಡಿದ ಸುಮಂಗಲೆಯರು, ಡೊಳ್ಳು, ಭಜನಾ ಮಂಡಳಿ ಮತ್ತು ಅಪಾರ ಭಕ್ತಸ್ತೋಮ ಮೆರವಣಿಗೆಗೆ ಕಳೆ ಕಟ್ಟಿದ ದೃಶ್ಯ ಅಪೂರ್ವವಾಗಿತ್ತು.

# 7ನೇ ವೇತನ ಆಯೋಗ ಅವಧಿ ವಿಸ್ತರಣೆ

ರಾಜ್ಯಪಾಲರ ಆದೇಶ ಪ್ರಕಾರ ರಾಜ್ಯದ ಆರ್ಥಿಕ ಇಲಾಖೆ ಉಪಕಾರ್ಯದರ್ಶಿ ಆದೇಶ ಪ್ರಕಟಿಸಿದ್ದು, ಇದರಂತೆ ಆಯೋಗ ವರದಿ ಸಲ್ಲಿಸಬೇಕಾಗಿದ್ದ ಗಡುವನ್ನು 19.05.2023ರಿಂದ ಆರು ತಿಂಗಳ ಅವಧಿಗೆ ವಿಸ್ತರಣೆ ಆಗಿದೆ.

ನಿವೃತ್ತ ಐಎಎಸ್ ಅಧಿಕಾರಿ ಸುಧಾಕರ್ ರಾವ್ ಅಧ್ಯಕ್ಷತೆಯ ವೇತನ ಆಯೋಗಕ್ಕೆ 2022ರ ನವೆಂಬರ್ 19ರಂದು ವರದಿ ಸಲ್ಲಿಸುವಂತೆ ಸೂಚಿಸಿ ಆರು ತಿಂಗಳ ಸಮಯ ನೀಡಲಾಗಿತ್ತು. ಅದು ಮೇ 19ಕ್ಕೆ ಕೊನೆಯಾಗುವುದರಲ್ಲಿತ್ತು. ಈಗ ಅದು ಮತ್ತೆ ಆರು ತಿಂಗಳಿಗೆ ವಿಸ್ತರಣೆ ಆಗಿದೆ.

**ಆಯೋಗದಲ್ಲಿ ಯಾರಿದ್ದಾರೆ?**

ಕರ್ನಾಟಕ ಸರ್ಕಾರವು ನಿವೃತ್ತ ಮುಖ್ಯ ಕಾರ್ಯದರ್ಶಿ ಕೆ.ಸುಧಾಕರ್ ರಾವ್ ಅವರ ನೇತೃತ್ವದಲ್ಲಿ 7ನೇ ರಾಜ್ಯ ವೇತನ ಆಯೋಗವನ್ನು 2017ರಲ್ಲಿ ರಚಿಸಿತ್ತು. ನಿವೃತ್ತ ಐಎಎಸ್ ಅಧಿಕಾರಿ ಪಿ.ಬಿ.ರಾಮಮೂರ್ತಿ, ಲೆಕ್ಕ ಪರಿಶೋಧನೆ ಮತ್ತು ಖಾತೆಗಳ ಇಲಾಖೆಯ ನಿವೃತ್ತ ಪ್ರಧಾನ ನಿರ್ದೇಶಕ ಶ್ರೀಕಾಂತ್ ಬಿ.ವನವಳ್ಳಿ ಅವರನ್ನು ಸದಸ್ಯರನ್ನಾಗಿ ಮತ್ತು ಮೂಲಸೌಕರ್ಯ ಇಲಾಖೆಯ ಜಂಟಿ ಕಾರ್ಯದರ್ಶಿ ಹೆಪ್ಸಿಬಾ ರಾಣಿ ಕೊರ್ಲಪಾಟಿ ಅವರನ್ನು ಸಮಿತಿಯ ಸದಸ್ಯ ಕಾರ್ಯದರ್ಶಿಯನ್ನಾಗಿ ರಾಜ್ಯ ಸರಕಾರವು ನೇಮಕ ಮಾಡಿತ್ತು.

**ಯಾವ ವಿಚಾರದ ಬಗ್ಗೆ ಆಯೋಗ ಶಿಫಾರಸು ಮಾಡುತ್ತದೆ?**

ರಾಜ್ಯದ 7ನೇ ವೇತನ ಆಯೋಗವು ಸರ್ಕಾರಿ ನೌಕರರು, ಅನುದಾನಿತ ಶಿಕ್ಷಣ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳ ಬೋಧಕೇತರ ಸಿಬ್ಬಂದಿ ಅಂದರೆ ಯುಜಿಸಿ, ಎಐಸಿಟಿಇ, ಐಸಿಎಆರ್ ವೇತನ ಶ್ರೇಣಿಯ ವೇತನ ಪಡೆಯುತ್ತಿರುವವರನ್ನು ಹೊರತು ಪಡಿಸಿದವರ ವೇತನ ಹಾಗೂ ವಿವಿಧ ಭತ್ಯೆಗಳು ಹಾಗೂ ನಿವೃತ್ತಿ ಸೌಲಭ್ಯಗಳನ್ನು ಪರಿಶೀಲಿಸುತ್ತದೆ.

ಕಾರ್ಯಸಾಧುವಾದ ನೂತನ ವೇತನ ಶ್ರೇಣಿಯನ್ನೂ ಆಯೋಗವು ಶಿಫಾರಸು ಮಾಡುತ್ತದೆ. ಕೇಂದ್ರದ ವೇತನ ಶ್ರೇಣಿಯನ್ನು ರಾಜ್ಯದಲ್ಲಿ ಅಳವಡಿಸುವ ಕುರಿತು ಪರಿಶೀಲನೆ ನಡೆಸುವುದು, ರಾಜ್ಯ ಸರ್ಕಾರವು ತುಟ್ಟಿ ಭತ್ಯೆ ನೀಡಲು ಅನುಸರಿಸಬೇಕಾದ ಸೂತ್ರವನ್ನು ರೂಪಿಸುವುದು, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ, ಪ್ರವಾಸ ರಜೆ ಸೌಲಭ್ಯ, ವೈದ್ಯಕೀಯ ಸೌಲಭ್ಯಗಳನ್ನು ನಿಗದಿ ಪಡಿಸಲು ಹಾಗೂ ಸುಧಾರಣೆ ತರಲು ಸಲಹೆ ನೀಡುವುದು, ನಿವೃತ್ತಿ ವೇತನ ಮತ್ತು ಸಂಬಂಧಿತ ಸೌಲಭ್ಯಗಳ ಪರಿಷ್ಕರಣೆ ಮೊದಲಾದ ಅಂಶಗಳ ಕುರಿತು ಕೂಡ ಏಳನೇ ವೇತನ ಆಯೋಗವು ಪರಿಶೀಲಿಸಿ ಶಿಫಾರಸು ನೀಡಲಿದೆ.

# ಸಾಧನೆಗೈದ ವಿದ್ಯಾರ್ಥಿಗಳಿಗೆ ಸತ್ಕಾರ



ಬೆಳಗಾವಿ: ಇತ್ತೀಚಿಗೆ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಸಾಧನೆಗೈದ ಲಿಂಗರಾಜ ಪದವಿ ಮಹಾವಿದ್ಯಾಲಯದ ಬಿ.ಎ. ಎರಡನೇ ಸಮಿಸ್ಟರ್ ವಿದ್ಯಾರ್ಥಿ ಸುಹಾಸ ಸಾವಟಕರ್ ನೇಪಾಳದಲ್ಲಿ ಜರುಗಿದ ಏಶಿಯನ್ ಕ್ರಾಸ್‌ಕಂಟ್ರಿ ಚಾಂಪಿಯನ್‌ದಲ್ಲಿ ಭಾರತದಿಂದ ಪ್ರತಿನಿಧಿಸಿ ಪ್ರಥಮ ಸ್ಥಾನ ಪಡೆದಿದ್ದಾರೆ. ಅಂತೆಯೆ ಬಿ.ಎ. 2ನೇ ಸೆಮಿಸ್ಟರ್ ಇನ್ನೋರ್ವ ವಿದ್ಯಾರ್ಥಿ ಕಿರಣ ವಿ.ಬಿ. ಮಂಗಳೂರಿನಲ್ಲಿ ಜರುಗಿದ ಆಲ್‌ಇಂಡಿಯಾ ಬಾಡಿಬಿಲ್ಡಿಂಗ್ ಚಾಂಪಿಯನ್‌ಸಿಪ್‌ದಲ್ಲಿ ಪ್ರಥಮಸ್ಥಾನ ಪಡೆದಿದ್ದಾನೆ.

ಈ ಇಬ್ಬರೂ ವಿದ್ಯಾರ್ಥಿಗಳ ಸಾಧನೆಗೆ ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷರಾದ ಡಾ.ಪ್ರಭಾಕರ ಕೋರೆಯವರು ಹರ್ಷ ವ್ಯಕ್ತಪಡಿಸಿ ಕೆಎಲ್‌ಇ ಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ಸತ್ಕರಿಸಿ ಅಭಿನಂದಿಸಿದ್ದಾರೆ.

ಈ ಸಂದರ್ಭದಲ್ಲಿ ಲಿಂಗರಾಜ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಎಚ್.ಎಸ್.ಮೇಲಿನಮನಿ, ದೈಹಿಕ ನಿರ್ದೇಶಕರಾದ ಡಾ.ಸಿ.ರಾಮರಾವ್, ಮಾಜಿ ಶಾಸಕರಾದ ಮಹಾದೇವಪ್ಪಣ್ಣಾ ಯಾದವಾಡ, ಕ್ಯಾಪ್ಟನ್ ಡಾ.ಮಹೇಶ ಗುರನಗೌಡರ ಉಪಸ್ಥಿತರಿದ್ದರು.

# ಯುವತಿ ಅಪಹರಿಸಿ ಹಣಕ್ಕಾಗಿ ಡಿಮ್ಯಾಂಡ್

ಶಿವಮೊಗ್ಗ: ಯುವತಿಯೊಬ್ಬಳನ್ನು ಅಪಹರಿಸಿರುವ ದುಷ್ಕರ್ಮಿಗಳು ಹಣಕಾಗಿ ಬೇಡಿಕೆ ಇರಿಸಿದ್ದು ಈ ಸಂಬಂಧ ದೂರು ದಾಖಲಾಗಿದೆ.



ಚನ್ನಗಿರಿ ತಾಲೂಕು ನಲ್ಲೂರು ಗ್ರಾಮದ ಯುವತಿ ಅಪಹರಣಕ್ಕೊಳಗಾದವಳು. ಈಕೆ ಉನ್ನತ ವ್ಯಾಸಂಗ ಮಾಡುತ್ತಿದ್ದು ಈಕೆಯನ್ನು ದುಷ್ಕರ್ಮಿಗಳು ಅಪಹರಿಸಿ ಅಜ್ಞಾತ ಸ್ಥಳಕ್ಕೆ ಕರೆದೊಯ್ದಿದ್ದಾರೆ. ಅಪಹರಣಕಾರರು ಯುವತಿಯ ದೂರವಾಣಿ ಸಂಖ್ಯೆಯಿಂದಲೇ ಕುಟುಂಬಸ್ಥರಿಗೆ ಹಾಗೂ ಸ್ನೇಹಿತರಿಗೆ ಕರೆ ಮಾಡಿ 20 ಲಕ್ಷ ರೂಪಾಯಿ ನೀಡಿದರೆ ಮಾತ್ರ ಆಕೆಯನ್ನು ಬಿಡುಗಡೆ ಮಾಡುವುದಾಗಿ ತಿಳಿಸಿದ್ದಾರೆ.

ಈ ಸಂಬಂಧ ಜಯನಗರ ಪೊಲೀಸ್ ಠಾಣೆಯಲ್ಲಿ ಯುವತಿ ಪೋಷಕರು ದೂರು ದಾಖಲಿಸಿದ್ದಾರೆ.

BELAGAVI VARADI KANNADA DAILY MORNING : Editor, Printer, Publisher & Owned By : **Satish Basavani Gudagenatti,** Basavani House No.53, Ashray Colony, Sarathi Nagar, Tv Center - 590019, TQ & DIST Belagavi, Karnataka.
Printed At : LAXMI PRINTERS, No.627. Auto Nagar - 590016.TQ & DIST Belagavi, Karnataka Mob : 9900332089